ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 13 ಮಾರ್ಚ್ 28, 1982 ಬೆಲೆ 60 ಪೈಸೆ

ಸಂಪಾದಕೀಯ

ಪ್ರಜಾಪ್ರಭುತ್ವಕ್ಕೆ ಸವಾಲು

ಕಳೆದೆರಡು ವರ್ಷಗಳಿಂದ ರಾಜ್ಯದ ಮುಖ್ಯ ಮಂತ್ರಿ ಶ್ರೀ ಗೂಂಡುರಾವ್ ರವರು ತನ್ನ ಅಧಿಕಾರ ಉಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ಪ್ರಜಾಪ್ರಭುತ್ವ ಕ್ರಮಗಳನ್ನೆಲ್ಲಾ ಗಾಳಿಗೆ ತೂರಿ ಸರ್ವಾಧಿಕಾರಿಯಂತೆ ವರ್ತಿಸಿಕೊಂಡು ಬಂದಿರುವುದನ್ನು ಕನ್ನಡಿಗರು ನೋಡಿದ್ದಾರೆ. ಆದರೆ ವಿಧಾನಮಂಡಲ ನಿಯಮಗಳನ್ನು ತುಚ್ಛೀಕರಿಸಿ ವರ್ತಿಸುವ ಧೈರ್ಯ ಈವರೆಗೆ ಯಾರಿಗೂ ಇರಲಿಲ್ಲ. ಇಂದಿರಾ ಗಾಂಧಿಯವರೂ ತುಂಬಾ ಎಚ್ಚರಿಕೆಯಿಂದ ನಡೆದಿರುತ್ತಾರೆ, ಆದರೆ ಗುಂಡುರಾಯರಿಗೆ ಇದೆಲ್ಲಾ ಬೇಕಿಲ್ಲ. ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರದ (PAC) ಸಮಿತಿಯು ಸರಕಾರವು ರಾಜ್ಯಕ್ಕೆ ಕೇಂದ್ರದಿಂದ ಬಂದ ಸಿಮೆಂಟನ್ನು ವಿತರಣೆಮಾಡುವಾಗ ಮುಖ್ಯಮಂತ್ರಿಯವರಿಂದ ಅಧಿಕಾರ ದುರುಪಯೋಗವಾಗಿರುವುದೆಂದು ತೀರ್ಮಾನಕ್ಕೆ ಬಂದು ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಶಿಫಾರಸು ಮಾಡಿದೆ. ಇದರಿಂದ ರೊಚ್ಚಿಗೆದ್ದ ಮುಖ್ಯ ಮಂತ್ರಿಯವರು ಶಾಸನ ಸಭೆಯಲ್ಲಿ ಇದು ಚರ್ಚೆಗೆ ಬಂದಾಗ ಈ ವರದಿಯನ್ನು ಖಂಡಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಮಾಡಿದರು. ಬಹುಶಃ ಹೀಗೆ ತೀರ್ಮಾನವಾಗಿರುವುದು ಚರಿತ್ರೆಯಲ್ಲೇ ಹೊಸತು. ಇದರ ಕೀರ್ತಿ ಮುಖ್ಯ ಮಂತ್ರಿ ಗುಂಡುರಾಯರದ್ದಾಗಿದೆ.

ಈ ಸಿಮೆಂಟ್ ಹಗರಣದ ಬಗ್ಗೆ ಎಲ್ಲ ವಿವರಗಳೂ ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿರುವುದರಿಂದ ಈಗ ಬರೆಯುವ ಅವಶ್ಯಕತೆ ಇಲ್ಲ. ಪ್ರಶ್ನೆ ಇರುವುದು ಇಷ್ಟೇ, ಕೇಂದ್ರದಿಂದ ತರಿಸಿದ 10,000 ಟನ್ ಸಿಮೆಂಟಿನಿಂದ (ತನ್ನ ವಿವಿಧ ಇಲಾಖೆಗಳಿಗೆಂದು ತರಿಸಿದ್ದು) ಭಾಗಶಃ ಅಂದರೆ 4,000 ಟನ್ ಸಿಮೆಂಟನ್ನು ಖಾಸಗಿ ಬಹು ಅಂತಸ್ತಿನ ಮನೆ ನಿರ್ಮಾಪಕರಿಗೆ ಕೊಟ್ಟದ್ದು ಸರಿಯೇ ? ಯಾವ ಆಧಾರದಲ್ಲಿ ಯಾರಿಗೆ ಇದನ್ನು ಹಂಚಲಾಯಿತು ? ಇದರ ಬಗ್ಗೆ ಸತ್ಯಾಂಶವನ್ನು ತಿಳಿಯಲು ನ್ಯಾಯಾಂಗ ವಿಚಾರಣೆಯಾಗಲೆಂದು ಸಮಿತಿ ತೀರ್ಮಾನಿಸಿದೆ. ಸಮಿತಿಯು ಅಧ್ಯಕ್ಷರಾದ ಶ್ರೀ ಬೊಮ್ಮಾಯಿಯವರು ಇದನ್ನು ಬಹಿರಂಗಗೊಳಿಸಿದು ಸರಿಯಲ್ಲವೆಂದು ಸರಕಾರದ ವಾದ. ಇದು ಸರಿಯೆಂದು ಇತರರ ಅಭಿಪ್ರಾಯ.

ವಿಧಾನ ಮಂಡಲವೇ ಈ ಸಮಿತಿಯನ್ನು ಆರಿಸಿರುವುದು. ಕಾಂಗ್ರೆಯು ಅದರಲ್ಲಿ ಬಹು ಸಂಖ್ಯಾತರು. ಎಲ್ಲಾ ಪಕ್ಷದವರು ಅದರಲಿದ್ದಾರೆ. ಅಧ್ಯಕ್ಷರು ಮಾತ್ರ ವಿರೋಧ ಪಕ್ಷದವರು. ಇದೊಂದು ಸಂಪ್ರದಾಯ. ಈ ಸಮಿತಿಗೆ ಎಲ್ಲರೂ ಗೌರವ ಕೊಡುವುದು ವಾಡಿಕೆ. ಇದರ ವರದಿಯನ್ನು ಚರ್ಚಿಸುವ ರೂಢಿಯಿಲ್ಲ. ಆದರೆ ಅದರ ಶಿಫಾರಸುಗಳನ್ನು ಜಾರಿಗೆ ತರಲು ಸರಕಾರ ಕ್ರಮ ತೆಗೆದು ಕೊಳ್ಳಬೇಕೆಂದಿದೆ. ಸರಕಾರ ಅದನ್ನು ಕಡೆಗಣಿಸಿ ಸುಮ್ಮನಿರ ಬಯಸಿದರೆಏನೂಮಾಡಲಿಕ್ಕಾಗದು ಆದರೆ ಆ ಕಮಿಟಿಯನ್ನು ತುಚ್ಛೀಕರಿಸುವುದಾಗಲೀ ಅದರ ಶಿಫಾರಸ್ಸುಗಳನ್ನು ಮೂದಲಿಸಿ ಖಂಡಿಸುವುದಾಗಲಿ, ಅದರ ವರದಿಯನ್ನು ಶಾಸನ ಸಭೆಯಲ್ಲಿ ಚರ್ಚಿಸಿ, ಖಂಡನಾ ನಿರ್ಣಯ ಮಾಡುವುದಾಗಲಿ ಸರಿಯಲ್ಲ. ಹಿಂದೆ ಶ್ರೀ ದೇವರಾಜ ಅರಸುರವರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ ಅವರ ಸಂಪುಟದ ಸಚಿವರೊಬ್ಬರನ್ನು ಆಗಿನ ಪಿ. ಎ. ಸಿ.ಯು ಟೀಕಿಸಿರುವಾಗ ಆ ವರದಿಗೆ, ವರದಿಯು ಬರೆಯಲು ಉಪಯೋಗಿಸಿದ ಕಾಗದದ ಬೆಲೆಯೂ ಇಲ್ಲವೆಂದು ಹೀಯಾಳಿಸಿದ್ದಾರೆ. ಈಗ ಗುಂಡು ರಾಯರು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ವರದಿಯನ್ನು ಖಂಡನೆ ಮಾಡುವ ನಿರ್ಣಯವನ್ನು ಶಾಸನ ಸಭೆಯಲ್ಲಿ ಮಾಡಿಸಿದ್ದಾರೆ. ಇದು ಖಂಡನೀಯ;ಪ್ರಜಾ ಪ್ರಭುತ್ವಕ್ಕೊಂದು ಸವಾಲು, ಸರ್ವಾಧಿಕಾರದ ಮುನ್ಸೂಚನೆ.

ಜನರ ಮೇಲೆ ಹೊರಲಾರದ ಹೊರೆ

[ಫೆಬ್ರವರಿ 26 ರಿಂದ 28 ರವರೆಗೆ ಕಲ್ಕತ್ತಾದಲ್ಲಿ ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯ ಸಭೆ ನಡೆಯಿತು. ಕೇಂದ್ರ ಸಮಿತಿ ಹೊರಡಿಸಿದ ಪತ್ರಿಕಾ ಹೇಳಿಕೆಯ ಸಾರಾಂಶವಿಲ್ಲಿದೆ.]


ಜನಸಾಮಾನ್ಯರ ಜೀವನ ಮಟ್ಟದ ಮೇಲೆ ಹೊರಲಾಗದ ಹೊರೆ ಹೊರಿಸುತ್ತಿರುವ ಕೇಂದ್ರದಲ್ಲಿರುವ ಕಾಂಗ್ರೆಸರಕಾರದ ನೀತಿಯನ್ನು ಕಲ್ಕತ್ತದಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ಈ ವರ್ಷದ ಕೇಂದ್ರ ಅಂದಾಜು ಪತ್ರಿಕೆಯಲ್ಲಿ ಹೇರಿಸಲ್ಪಟ್ಟ ರೂ. 535 ಕೋಟಿ ಹೊಸ ಕರಭಾರವೇ ಉದಾಹರಣೆ. ಪೋಸ್ಟ್ ಮತ್ತು ಟೆಲಿಗ್ರಾಫ್ ಹಾಗೆಯೇ ರೀಲ್ವೆ ಪ್ರಯಾಣ, ವಸ್ತುಗಳ ರವಾನೆಯ ದರವನ್ನೂ ಈ ಮುಂಚೆಯೇ ಏರಿಸಲಾಗಿದೆ. ರಾಜ್ಯ ವಿದ್ಯುಚ್ಛಕ್ತಿ ನಿಗಮ ಮತ್ತು ರಸ್ತೆ ಸಾರಿಗೆ ಸಂಸ್ಥೆಗಳು ಹಾನಿಯನ್ನೆದುರಿಸುತ್ತಿರುವುದರಿಂದ, ವಿದ್ಯುಚ್ಛಕ್ತಿ-ಸಾರಿಗೆ ದರಗಳನ್ನು ಹೆಚ್ಚಿಸಬೇಕೆಂದು ರಾಜ್ಯ ಸರ್ಕಾರಗಳಿಗೆ ಆದೇಶ ನೀಡಲಾಗಿದೆ. ಅತಿ ಪ್ರಸರಣವನ್ನು ತಡೆ ಹಿಡಿಯಲಾಗಿದೆಯೆಂದು ಸರ್ಕಾರ ಹೆಮ್ಮೆ ಪಟ್ಟು ಕೊಳ್ಳುತ್ತಿರುವಂತೆಯೇ ಚಿಲ್ಲರೆ ಮಾರಾಟದ ಬೆಲೆ ಹೆಚ್ಚಾಗುತ್ತಾ ಇದೆ. ಜೀವನ ಸೂಚ್ಯಾಂಕದ ನಂಬರು 463 ತಲ್ಪಿರುವುದನ್ನು ನೋಡುವಾಗಲೇ ಬೆಲೆಗಳು ಎಷ್ಟು ತೀವ್ರಗತಿಯಲ್ಲಿ ಮೇಲೇರುತ್ತಿವೆಂಬುದಕ್ಕೆ ನಿದರ್ಶನವಾಗಿದೆ. ಇದರ ಜೊತೆಯಲ್ಲೇ ನೌಕರದಾರರ ಮೇಲೆ ಪ್ರತ್ಯಕ್ಷ ದಬ್ಬಾಳಿಕೆ ನಡೆಸಲಾಗುತ್ತಿದೆ. ಉದಾಹಣೆಗಾಗಿ, ನೌಕರದಾರರಿಗೆ ಸಿಗಬೇಕಾದ ಹೆಚ್ಚಿನ ತುಟ್ಟಿಭತ್ತೆಯನ್ನು ಕೊಡದೆ ಠೇವಣಿ ರೂಪದಲ್ಲಿಡುವುದು ಮುಂತಾದವು.

ಹಣಕಾಸು ಸಂಸ್ಥೆಯಿಂದ ಕೇಂದ್ರ ಸರ್ಕಾರ ಸಾಲ ಪಡೆಯುವಾಗಲೇ, ಜನರ ಜೀವನದ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಈ ಹಣಕಾಸು ಸಂಸ್ಥೆ ಎಂಬ ಎಚ್ಚರಿಕೆಯನ್ನು ನಮ್ಮ ಪಾರ್ಟಿ ಕೊಟ್ಟಿತ್ತು. ನಮ್ಮ ಎಚ್ಚರಿಕೆ ನಿಜವಾಗುತ್ತಿದೆ. ಎಲ್ಲ ವಿರೋಧ ಪಕ್ಷ

(8ನೇ ಪುಟವನ್ನು ನೋಡಿ)

[ಸ್ವಾತಂತ್ರ್ಯವನ್ನು ಬಯಸುವದು ಮನುಷ್ಯನ ಜನ್ಮಸಿದ್ಧ ಹಕ್ಕು. ಶ್ರಮಿಕ ವರ್ಗವೇ ಸಮಾಜದ ನಿಜವಾದ ವಾರಸುದಾರ ವರ್ಗ. ಶೋಷಿತ ಜನತೆಯ ಅಧಿಕಾರ ಸ್ಥಾಪಿಸುವುದೇ ಶ್ರಮಿಕ ವರ್ಗದ ಅಂತಿಮ ಗುರಿ.

ಈ ಆದರ್ಶಗಳ ಸಾಕಾರಕ್ಕೊಸ್ಕರ ನಮಗೆ ಯಾವ ಶಿಕ್ಷೆ ವಿಧಿಸಲಾಗುದೋ ಅದನ್ನು ನಾವು ಸ್ವಾಗತಿಸುತ್ತೇವೆ.



ಕ್ರಾಂತಿಯ ಈ ಮಹಾನ್ ಧ್ಯೇಯೋದ್ದೇಶಕ್ಕಾಗಿ ನಾವು ನಮ್ಮ ಯೌವನವನ್ನು ಹೋರಾಟದ ವೇದಿಕೆಗೆ ನೈವೇದ್ಯವಾಗಿ ತಂದಿರುವೆವು. ಏಕೆಂದರೆ ಈ ಮಹಾನ್ ಧ್ಯೇಯಕ್ಕಾಗಿ ಯಾವುದೇ ತ್ಯಾಗವೂ ಕಡಿಮೆಯೇ.

ನಾವು ಸಂತುಷ್ಟರಾಗಿದ್ದೇವೆ. ಕ್ರಾಂತಿಯ ಆಗಮನವನ್ನು ಉತ್ಸುಕತೆಯಿಂದ ಪ್ರತೀಕ್ಷಿಸುತ್ತಿದ್ದೇವೆ. ಕ್ರಾಂತಿ ಚಿರಾಯುವಾಗಲಿ !

ದಿಲ್ಲಿ ನ್ಯಾಯಾಲಯದಲ್ಲಿ —ಭಗತ್‌ಸಿಂಗ್‌ರ ಹೇಳಿಕೆ

[23.3.82ರಂದು ದೇಶಾದ್ಯಂತ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ ಇವರುಗಳ 51 ನೇ ವರ್ಧಂತಿಯನ್ನು ದೇಶ ಆಚರಿಸಿತು. 23-3-1931 ರಂದು ಈ ಮೂವರು ಕ್ರಾಂತಿಕಾರಿಗಳನ್ನು ಬ್ರಿಟಿಶ್ ಸರಕಾರ ಗಲ್ಲಿಗೆ ಏರಿಸಿತ್ತು.]

ನೀವು ನಮ್ಮ ಕೈಗಳಾಗಿರಿ!

ಸಂಪೂರ್ಣ ರಶಿಯಾ ಓದಲು ಕಲಿಯತೊಡಗಿತ್ತು. ಹಾಗೂ ರಾಜ್ಯಶಾಸ್ತ್ರ ಅರ್ಥಶಾಸ್ತ್ರ, ಇತಿಹಾಸ ಇವುಗಳ ಅಭ್ಯಾಸ ನಡೆಸಿತ್ತು–ಕಾರಣವೇನೆಂದರೆ ಜನರಲ್ಲಿ ಜ್ಞಾನ ಪ್ರಾಪ್ತಿಯ ಇಚ್ಛೆ ಚಿಗುರಿತ್ತು...... ಪ್ರತಿಯೊಂದು ನಗರದಲ್ಲಿ, ಬಹುಸಂಖ್ಯ ಶಹರುಗಳಲ್ಲಿ ಹಾಗೂ ಗಡಿಭಾಗದಲ್ಲಿ ಪ್ರತಿಯೊಂದು ರಾಜಕೀಯ ಗುಂಪಿನ ತನ್ನದೇ ಆದ ವರ್ತಮಾನ ಪತ್ರವಿರುತ್ತಿತ್ತು. ಕೆಲವೆಡೆಯಂತೂ ಅನೇಕ ವರ್ತಮಾನ ಪತ್ರಿಕೆಗಳಿದ್ದವು. ಸಾವಿರಾರು ಸಂಘಟನೆಗಳು ಲಕ್ಷಾವಧಿ ಪತ್ರಿಕೆಗಳನ್ನು ಹಂಚುತ್ತಿದ್ದವು, ಹಾಗೂ ಸೈನ್ಯದಲ್ಲಿ, ಹಳ್ಳಿಗಳಲ್ಲಿ, ಕಾರ್ಖಾನೆಗಳಲ್ಲಿ ಹಾಗೂ ರಸ್ತೆ ಬೀದಿಗಳಲ್ಲಿ ಅವುಗಳ ಸುರಿಮಳೆ ಸಾಗಿತ್ತು. ದೀರ್ಘಕಾಲದವರೆಗೆ ತಡೆಹಿಡಿಯಲ್ಪಟ್ಟಿದ್ದ ಜ್ಞಾನಪ್ರಾಪ್ತಿಯ ಹಸಿವು ಕ್ರಾಂತಿಯೊಂದಿಗೇನೇ ದಶದಿಕ್ಕುಗಳಿಗೂ ಹಬ್ಬಿತು ಹಾಗೂ ವಿರಾಟ ರೂಪ ತಾಳಿತು. ಒಂದೇ ಒಂದು ಸ್ಮೋಲ್ನಿ ಸಂಸ್ಥೆಯಿಂದ ಮೊದಲಿನ ಆರು ತಿಂಗಳುಗಳಲ್ಲಿ ಪ್ರತಿ ದಿವಸ ಟನುಗಟ್ಟಲೆ ಸಾಹಿತ್ಯವು ಗಾಡಿ, ರೈಲುಗಾಡಿ ತುಂಬಿ ದೇಶದ ಮೂಲೆಮೂಲೆಗೂ ಸಾಗಿಸಲ್ಪಡುತ್ತಿತ್ತು. ತೃಷಾರ್ತ ಮರುಭೂಮಿಯು ಯಾವರೀತಿ ನೀರನ್ನಿಂಗಿಸಿಕೊಳ್ಳುತ್ತದೆಯೋ ಅದೇ ರೀತಿಯಲ್ಲಿ ರಶಿಯನ್ ಜನತೆಯು ಸಾಹಿತ್ಯಪ್ರಾಶನ ನಡೆಸಿತ್ತು.

ಇನ್ನು ಈ ಸಾಹಿತ್ಯವೆಂದರೆ ಮನಸ್ಸನ್ನು ಭ್ರಷ್ಟಗೊಳಿಸುವ ದಂತಕಥೆ, ವಿಪರ್ಯಸ್ತ ಇತಿಹಾಸ, ಧರ್ಮಾಂಧ ಪ್ರಚಾರ, ಇಲ್ಲವೇ ಅಗ್ಗದ ಕಥೆ-ಕಾದಂಬರಿಗಳಾಗಿರಲ್ಲಿಲ್ಲ; ಸಾಮಾಜಿಕ ಹಾಗೂ ಆರ್ಥಿಕ ತತ್ವಪ್ರಣಾಲಿಯ, ತತ್ವಜ್ಞಾನದ, ಟಾಲ್‌ಸ್ಟಾಯ್ ಗೋಗೊಲ್ ಮತ್ತು ಗೋರ್ಕಿ ಇವರುಗಳ ಪುಸ್ತಕಗಳು ಈ ಸಾಹಿತ್ಯದಲ್ಲಿ ಸಮಾವೇಶಗೊಂಡಿದ್ದವು...

ಸೀಮಾರೇಷೆಯ ಅಚೆಬದಿಯಲ್ಲಿದ್ದ ಹನ್ನೆರಡನೇ ಸೈನ್ಯದಳದ ಠಾಣೆಗೆ ನಾವು ಹೋಗಿದ್ದಾಗ ಹಸಿದು ಕಂಗಾಲಾಗಿದ್ದ ಸೈನಿಕರು ಕೆಸರು ತುಂಬಿದ ಕಂದಕಗಳಲ್ಲೆ ಅತ್ಯಂತ ನಿರಾಶ ಮನಃಸ್ಥಿತಿಯಲ್ಲಿ ಕುಳಿತವರಾಗಿ ನಮಗೆ ಕಂಡರು. ಅವರ ಮುಖಗಳೆಲ್ಲ ಒಣಗಿಹೋಗಿದ್ದವು, ಅವರ ಹರಿದ ಸಮವಸ್ತ್ರಗಳ ಮೂಲಕ ಅವರ ಶರೀರದ ಮೇಲಿನ ನೀಲಿ ನರಗಳು ಸ್ಪಷ್ಟವಾಗಿ ಕಾಣುತಿದ್ದವು.

ಅವರು ಉತ್ಸುಕತೆಯಿಂದ ನಮ್ಮನ್ನು ವಿಚಾರಿಸಿದರು, 'ನೀವು ಓದಲು ಏನಾದರೂ ತಂದಿರುವಿರಾ ?'

(ಜಾನ್ ರೀಡನ 'ಜಗವನ್ನೇ ಅಲ್ಲಾಡಿಸಿದ ಹತ್ತು ದಿನಗಳು' ಪುಸ್ತಕದಿಂದ)

ಇಷ್ಟೊಂದು ವಿರಾಟ ಪ್ರಮಾಣದಲ್ಲಿರದಿದ್ದರೂ ಕೂಡ ಒಂದು ಅತಿ ದೊಡ್ಡ ಜ್ಞಾನದ ಹಸಿವು ಇಂದು ನಮ್ಮೆಡೆಗೂ ಕಂಡು ಬರುತ್ತಿದೆ. ದೂರ, ಸರ್ವ ದೂರ, ನಮ್ಮ ಕೈಗಳು ಅಲ್ಲಿಯವರೆಗೆ ತಲುಪಲಾರವು.

ನೀವು ನಮ್ಮ ಕೈಗಳಾಗಿರಿ.

ಇಂಥ ಜನ ಕಾಣಸಿಕ್ಕರೆ ಅವರನ್ನು ಐಕ್ಯರಂಗದ ಚಂದಾದಾರರನ್ನಾಗಿ ಮಾಡಿರಿ !

ಮುಳುಬಾಗಿಲಿನಲ್ಲಿ ನಡೆದ ಪ್ರಾಂತ ರೈತ ಸಮ್ಮೇಳನ

ಅಂಗೀಕರಿಸಿದ ನಿರ್ಣಯಗಳು

ಬೆಂಬಲಿತ ಬೆಲೆಗಾಗಿ ಮತ್ತು ಕನಿಷ್ಠ ಕೂಲಿ ಜಾರಿಗೆ ಒತ್ತಾಯ :

ಆಳುವ ಪಕ್ಷಗಳ ಬಂಡವಾಳಶಾಹಿ ನೀತಿಯಿಂದಾಗಿ ದೇಶದ ಆರ್ಥಿಕ ಸ್ಥಿತಿ ತೀರ ಹದಗೆಟ್ಟಿದೆ. ಕೃಷಿಯು ಅತ್ಯಂತ ತೀವ್ರ ತೊಂದರೆಗೊಳಗಾಗಿದೆ. ಪೇಟೆ ಪಟ್ಟಣದ ಬಂಡವಾಳಶಾಹಿ ಉತ್ಪತ್ತಿ ವಸ್ತುಗಳ ಬೆಲೆ, ಜೀವನಾವಶ್ಯಕ ವಸ್ತುಗಳ ಬೆಲೆ ಮತ್ತು ರೈತ ಕೊಳ್ಳುವ ಒಕ್ಕಲುತನಾವಶ್ಯಕ ವಸ್ತುಗಳ ಬೆಲೆಯಲ್ಲಿ ವಿಪರೀತ ಬೆಲೆ ಏರಿಕೆ ಉಂಟಾಗಿದೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ಬಡತನ ಹೆಚ್ಚಾಗುತ್ತ ನಡೆದಿದೆ. ರೈತನು ಕೃಷಿ ಹುಟ್ಟುವಳಿ ಮಾಡುವಲ್ಲಿ ಉತ್ಸಾಹವನ್ನೇ ಕಳೆದುಕೊಳ್ಳುವಂತಾಗಿದೆ. ಕೃಷಿಯು ವಿನಾಶದ ಅಂಚಿನಲ್ಲಿದೆ.

ಕೃಷೀ ಮಾರುಕಟ್ಟೆಯು ಮೇಲೆ ಗುತ್ತೇದಾರಿ ಬಂಡವಾಳಶಾಹಿಗಳ ಮತ್ತು ಏಕಸ್ವಾಮ್ಯ ವ್ಯಾಪಾರಸ್ಥರ ಹಿಡಿತವು ಇನ್ನೂ ಅಭಾದಿತವಾಗಿ ಮುಂದುವರಿಯುತ್ತಲಿದೆ. ಎಫ್. ಸಿ. ಐ. ಮತ್ತು ಸಿ. ಸಿ. ಐ. ಮುಂತಾದ ಸರ್ಕಾರಿ ಸಂಸ್ಥೆಗಳು ರೈತ ಬೆಳೆಸಿದ ಫಸಲನ್ನು ನ್ಯಾಯಯುತ ಬೆಲೆಗಳಿಗೆ ಖರೀದಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿವೆ. ಕೃಷಿ ಹುಟ್ಟುವಳಿಗಳ ಬೆಲೆ ನಿಗದಿ ಪಡಿಸುವ ಎ. ಪಿ. ಸಿ. (A P C) ಕೂಡ ಗುತ್ತೇದಾರಿ ಬಂಡವಾಳಶಾಹೀ ಮತ್ತು ಸಗಟು ವ್ಯಾಪಾರಸ್ಥರ ಹಿತಾಸಕ್ತಿಗಳಿಗನುಗುಣವಾಗಿ ಬೆಲೆಗಳನ್ನು ನಿರ್ಧರಿಸುತ್ತಲಿದೆ. ಕೃಷೀ ಹುಟ್ಟುವಳಿ ಮಾರುಕಟ್ಟೆಯು ದಲ್ಲಾಲಿಗಳ ಕೈಯಲ್ಲಿ ಸಿಕ್ಕು ರೈತ, ತನ್ನ ಫಸಲನ್ನು ಅಲ್ಪ ಬೆಲೆಗೆ ಮಾರುವಂತಾಗಿದೆ. ಕೃಷಿ ಹುಟ್ಟುವಳಿ ಮಾರುಕಟ್ಟೆಗೆ ಸಂಬಂಧಿಸಿ ಕಾನೂನು ಮತ್ತು ಎ. ಪಿ. ಎಂ. ಸಿ. ಯಂಥ ಸಂಸ್ಥೆಗಳಿದ್ದರೂ ಕೂಡ ಅವ್ಯವಹಾರಗಳನ್ನು, ಮೋಸವನ್ನು ತಡೆಗಟ್ಟಲು ಸಾಧ್ಯವಾಗಿಲ್ಲ.

ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಕೂಡಲೇ ರೈತನ ಫಸಲಗೆ ಲಾಭದಾಯಕ ಬೆಂಬಲಿತ ಬೆಲೆಯನ್ನು ನಿರ್ಧರಿಸಬೇಕಾಗಿದೆಯಲ್ಲದೇ, ವರ್ಷವಿಡೀ ಅದೇ ಬೆಲೆ ಮುಂದುವರಿಯಬೇಕು. ಮಾರುಕಟ್ಟೆಯಲ್ಲಿಯ ಮೋಸ, ಅವ್ಯವಹಾರ ತಡೆಗಟ್ಟಲು ಸರಕಾರಿ ಮಾರುಕಟ್ಟೆಗಳಾದ ಸಿ. ಸಿ. ಐ. ಎಫ್. ಸಿ. ಐ. ಮುಂತಾದ ಸಂಸ್ಥೆಗಳು ಒಕ್ಕಲುತನ ಹುಟ್ಟುವಳಿಗಳ ಸಗಟು ವ್ಯಾಪಾರವನ್ನೂ ಕೈಗೊಳ್ಳಬೇಕು. ಮಧ್ಯವರ್ತಿಗಳ ಶೋಷಣೆಯಿಂದ ರೈತನನ್ನು ಮುಕ್ತಗೊಳಿಸಬೇಕು.

ಲಾಭದಾಯಕ ಬೆಂಬಲಿತ ಬೆಲೆ ಇಲ್ಲದೆ ವಿನಾಶದ ಅಂಚಿಗೆ ನೂಕಲ್ಪಟ್ಟ ರೈತ ಜೀವ, ರೀತಿಯ ಹೋರಾಟ ನಡೆಸುವಂತಾಗಿದೆ. ಇದೇ ಸಂದರ್ಭದಲ್ಲಿ ಕೃಷಿ ಕೂಲಿಕಾರರು ರಾಜ್ಯದಾದ್ಯಂತ ಅತೀ ಕಡಿಮೆ ಕೂಲಿ ಪಡೆಯುತ್ತಿದ್ದಾರೆ. ದಿನದಲ್ಲಿ 10-12 ಘಂಟೆ ದುಡಿಯುತ್ತಿದ್ದರೂ ಅವರಿಗೆ ಅತೀ ಕಡಿಮೆ ಕೂಲಿ ಸಿಗುತ್ತಿದೆ. ಕನಿಷ್ಠ ಕೂಲಿ ಪುನರ್‌ವಿಮರ್ಶಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದರೂ, ಸರ್ಕಾರ ವಿಳಂಬ ನೀತಿ ಅನುಸರಿಸುತ್ತ ಬಂದಿದೆ. ಮಾರ್ಚ್ ಒಂದರಿಂದ ಹೊಸ ದರ ಜಾರಿ ತಂದಿದೆ. ಪ್ರಾಂತ ರೈತ ಸಂಘ ನೂತನ ದರಗಳನ್ನು ಒಪ್ಪಿಕೊಂಡಿಲ್ಲ. 'ತುಟ್ಟಿಭತ್ತೆ'ಯನ್ನು ಸರ್ಕಾರ ಕೈಬಿಟ್ಟಿದೆ.

ಈ ಕೂಡಲೇ ರಾಜ್ಯಾದ್ಯಂತ ಪರ್ಯಾಯ ವ್ಯವಸ್ಥೆ ಜಾರಿಗೆ ಬರಬೇಕೆಂದು ಒತ್ತಾಯಿಸಿ ಹೋರಾಡುವದು ಅತ್ಯವಶ್ಯಕವೆಂದು ಪ್ರಾಂತ ರೈತ ಸಂಘದ 7ನೇ ಸಮ್ಮೇಳನ ಅಭಿಪ್ರಾಯ ಪಟ್ಟಿದೆ.

ಲಾಭದಾಯಕ ಬೆಂಬಲಿತ ಬೆಲೆ ನಿಗದಿಗಾಗಿ ರೈತರು, ಸೂಕ್ತ ಕೂಲಿಗಾಗಿ ರೈತ ಕೂಲಿಕಾರರು ಐಕ್ಯ ಹೋರಾಟ ಕೈಕೊಳ್ಳಬೇಕು. ಈ ಎರಡು ಅಂಶಗಳ ಹೋರಾಟ ಅತ್ಯಂತ ನಿಕಟ ಸಂಬಂಧ ಹೊಂದಿದೆ. ಆದ್ದರಿಂದ ರಾಜ್ಯಾದ್ಯಂತ ಲಾಭದಾಯ ಬೆಲೆಗಾಗಿ, ಕನಿಷ್ಟಕೂಲಿ ಜಾರಿಗಾಗಿ ವಿಶಾಲ ಐಕ್ಯ ಹೋರಾಟ ನಡೆಸಬೇಕೆಂದು ಸಮ್ಮೇಳನ ಕರೆ ಕೊಡುತ್ತದೆ.

ಇದೇ ಏಪ್ರಿಲ್ 5ರಂದು 'ರೈತರ ಬೇಡಿಕೆ ದಿನಾಚರಣೆ'ಯನ್ನು ಆಚರಿಸಬೇಕೆಂದು ಸಮ್ಮೇಳನ ತೀರ್ಮಾನಿಸಿದೆ.

ಈ ಮೇಲ್ಕಂಡ ಠರಾವಲ್ಲದೇ ಇನ್ನೂ ಅನೇಕ ಠರಾವುಗಳನ್ನು 'ಸಮ್ಮೇಳನ ಅಂಗೀಕರಿಸಿದೆ. ಕಾಂಗ್ರೆಸ್ ಸರ್ಕಾರಗಳು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಸುತ್ತಿರುವ ಧಾಳಿಗಳನ್ನು ಖಂಡಿಸುವ, ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಸರ್ಕಾರ ದಲಿತರ ಮೇಲೆ ನಡೆಸುವ ದಮನಕಾರಿ ಕ್ರಮಗಳನ್ನು ಖಂಡಿಸುವ ಠರಾವುಗಳನ್ನು ಸಮ್ಮೇಳನ ಅಂಗೀಕರಿಸಿದೆ

ಕೃಷಿ ಕೂಲಿಕಾರರಿಗೆ ತುಟ್ಟಿಭತ್ತೆ ಕೊಡುವಂತೆ ಕಾನೂನು ಮಾಡುವದರೊಂದಿಗೆ ಕನಿಷ್ಠ ರೂ 10 ದಿನಗೂಲಿ ಸಿಗಬೇಕೆಂದು ಒತ್ತಾಯಿಸುವ, ಕೃಷಿ ವಿಶ್ವವಿದ್ಯಾಲಯ (ಧಾರವಾಡ) ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸುವ, ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ಪರಿಹಾರ ಕೊಡಲು ಒಂದು ಸಮಗ್ರ ಯೋಜನೆಯನ್ನು ರೂಪಿಸಲು ಎಲ್ಲಾ ರಾಜಕೀಯ ಪಕ್ಷಗಳ ಮತ್ತು ರೈತ ಸಂಘಗಳ ಪ್ರತಿನಿಧಿಗಳ ಸಮಿತಿ ರಚಿಸಬೇಕೆಂಬ. ಬಲಾತ್ಕಾರದಿಂದ ಸಾಲವನ್ನು ವಸೂಲಿ ಮಾಡುವುದನ್ನು ನಿಲ್ಲಿಸಬೇಕು. ಮತ್ತು ಬಡ ರೈತರ ಸಾಲವನ್ನು ಮಾಫೀ ಮಾಡಬೇಕೆಂಬ, ಮಲಪ್ರಭಾ ಚಳುವಳಿ ಮತ್ತು ಇತರ ಚಳುವಳಿ ಸಂದರ್ಭದಲ್ಲಿ ರೈತಕೂಲಿಕಾರರ ಮೇಲೆ ಹಾಕಿರುವ ಎಲ್ಲಾ ಕೇಸುಗಳನ್ನು ನಿಶ್ಯರ್ಥವಾಗಿ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು

ರೇಷ್ಮೆ ಬೆಳೆಗೆ ನ್ಯಾಯಬೆಲೆ, ಪತ್ರಕರ್ತರ ಮೇಲೆ ನಡೆದ ಹಲ್ಲೆ, ಲೇವಿ ಪದ್ಧತಿ ರದ್ದುಗೊಳಿಸಲು ಒತ್ತಾಯಿಸಿ, ನೀರಾವರಿ ಯೋಜನೆಗಳನ್ನು ತ್ವರಿತಗೊಳಿಸಲು ಒತ್ತಾಯಿಸಿ, ಪ. ಬಂಗಾಲ ಮತ್ತು ತ್ರಿಪುರಾ ಎಡರಂಗ ಸರ್ಕಾರಗಳು ರೈತರು, ಕೃಷಿ ಕೂಲಿಕಾರರ ಏಳಿಗೆ ಕುರಿತು ಕೈಗೊಂಡಿರುವ ಕ್ರಮಗಳಿಗಾಗಿ ಅಭಿನಂದಿಸುವ, ಭೂನ್ಯಾಯ ಮಂಡಲಿಗಳ ಭ್ರಷ್ಟಾಚಾರ ಖಂಡಿಸಿ, ಹರಿಜನ-ಗಿರಿಜನರಿಂದ ವಶಪಡಿಸಿಕೊಂಡಿರುವ ಭೂಮಿಯನ್ನು ವಾಪಸ್ ಕೊಡುವಂತೆ ಒತ್ತಾಯಿಸಿ, ಗ್ರಾಮಾಂತರ ಪ್ರದೇಶದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಕುರಿತು ಐ ಎಂ. ಎಫ್. ಸಾಲ ಕುರಿತು, ಸಾಮ್ರಾಜ್ಯಶಾಹಿ ಯುದ್ಧಕೋರ ನೀತಿಯ ಕುರಿತು ಸಮ್ಮೇಳನ ಠರಾವುಗಳನ್ನು ಅಂಗೀಕರಿಸಿದೆ.

ಕೃತಜ್ಞತೆಗಳು

ಕರ್ನಾಟಕ ಪ್ರಾಂತ ರೈತ ಸಂಘದ ಏಳನೇ ರಾಜ್ಯ ಸಮ್ಮೇಳನವನ್ನು ಮಾರ್ಚ್ 11ರಿಂದ 14ರವರೆಗೆ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಯಶಸ್ವಿಯಾಗಿ ನಡೆಸಲು ಹಲವಾರು ಮುಂದಾಳುಗಳೂ, ಕಾರ್ಯಕರ್ತರುಗಳೂ ದಿನ ರಾತ್ರಿ ಎಂಬಂತೆ ಶ್ರಮಿಸಿರುವರು. ಮುಳಬಾಗಿಲಿನ ಮತ್ತು ಕೋಲಾರ ಜಿಲ್ಲೆಯ ರೈತ ಸಂಘದ ಮುಂದಾಳುಗಳು ಮತ್ತು ಕಾರ್ಯಕರ್ತರಿಗೆ ವಿಶೇಷವಾದ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸುವೆವು. ಸಮ್ಮೇಳನವನ್ನು ವ್ಯವಸ್ಥಿತವಾಗಿ ನಡೆಸಿ ಯಶಸ್ವಿಗೊಳಿಸಲು ಶ್ರಮಿಸಿದ ಸ್ವಾಗತ ಸಮಿತಿಯವರಿಗೆ ನಮ್ಮ ಕೃತಜ್ಞತೆಗಳು ಸಮ್ಮೇಳನದಲ್ಲಿ ಭಾಗವಹಿಸಿರುವ ಪ್ರತಿನಿಧಿಗಳು, ವೀಕ್ಷಕರು ಮತ್ತು ಕೊನೆಯ ದಿನ ಮೆರವಣಿಗೆ, ಬಹಿರಂಗ ಸಭೆಯಲ್ಲಿ ಭಾಗವಹಿಸಿರುವ ಕಾರ್ಮಿಕರಿಗೆ ಹಾಗೂ ಇತರರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಹಾಗೆಯೇ, ಸಮ್ಮೇಳನವನ್ನು ಯಶಸ್ವಿಗೊಳಿಸಲು ಉದಾರ ಸಹಾಯ ನೀಡಿದವರೆಲ್ಲರಿಗೂ ಕೃತಜ್ಞತೆಗಳು.

ವಿ. ಎಸ್. ಹಳಕಟ್ಟಿ
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ಪ್ರಾಂತ ರೈತ ಸಂಘ.

ಪಿ. ರಾಮಚಂದ್ರರಾವ್
ಅಧ್ಯಕ್ಷ

ಸಮ್ಮೇಳನದಲ್ಲಿ ಆಯ್ಕೆಯಾದ ಕಾರ್ಯಕಾರಿ ಸಮಿತಿ ಸದಸ್ಯರು

1) ಎಚ್ ಸಿ. ಚನ್ನಪ್ಪ
2) ಅಬ್ರಹಾಂ ಕರ್ಕಡ
3) ಎಸ್. ಎಚ್ ಕಪ್ಪಂಣವರ
4) ಎಂ. ಕೆ. ಭಟ್
5) ಲಕ್ಷ್ಮಣರೆಡ್ಡಿ
6) ಲಕ್ಕಣ್ಣ
7) ನಾಗಿರೆಡ್ಡಿ
8) ನಿತ್ಯಾನಂದಜೀ
9) ಸೂರ್ಯನಾರಾಯಣ ಭಟ್
10) ಎಂ. ಎಸ್. ಉಗ್ರಪ್ಪ
11) ಸುಂದರರಾಜ್
12) ಲಿಂಗಪ್ಪ
13) ರಾಮಭದ್ರಯ್ಯ
14) ಟಿ ಬಿ. ಸುಬ್ಬಯ್ಯ
15) ಮೋನಪ್ಪ ಗೌಡ
16) ಡೇವಿಡ್ ಕರ್ಕಡ
17) ಗಂಗಾಧರ ಪಲ್ಲೇದ
18) ಅಹೋಬಲನಾಯ್ಕ
19) ಆರ್. ಎಸ್. ಚನ್ನಬಸವಂಣ
20) ಎಂ. ಎಸ್. ಧಾರೇಶ್ವರ
21) ಫಕೀರಪ್ಪ ಹೋತನಳ್ಳಿ
22) ಬಿ. ವಿಷ್ಣುಮೂರ್ತಿ

ಕಲ್ಕತ್ತಾದಲ್ಲಿ ನಡೆಯಲಿರುವ A I K S ಸಮ್ಮೇಳನಕ್ಕೆ ಆಯ್ಕೆಯಾದ ಪ್ರತಿನಿಧಿಗಳು

1) ಪಿ. ರಾಮಚಂದ್ರ ರಾವ್
2) ಎಚ್. ಮುಗುವಾಳಪ್ಪ
3) ಭೀಮಸಿ ಕಲಾದಗಿ
4) ಎಸ್. ಲಕ್ಷ್ಮಯ್ಯ
5) ವಿ ಎಸ್. ಹಳಕಟ್ಟಿ
6) ಯು. ಜನಾರ್ಧನ ನಾಯ್ಕ
7) ಪಿ. ಜಗನ್ನಾಥ
8) ಚಂದ್ರಶೇಖರ ಬಾಳೆ
9) ಕಲ್ಲಪ್ಪ ಕಿರಣಗಿ
10) ವೆಂಕಟ ರಾಮಯ್ಯ
11) ಸಂಗ್ರಾಮ
12) ಲಕ್ಷ್ಮಣ ರೆಡ್ಡಿ
13) ಸೂರ್ಯನಾರಾಯಣಭಟ್
14) ನಿತ್ಯಾನಂದಜೀ
15) ಅಬ್ರಹಾಂ ಕರ್ಕಡ

ಬದಲಿ ಪ್ರತಿನಿಧಿಗಳು

1) ರಾಮಭದ್ರಯ್ಯ
2) ಗಂಗಾಧರ ಪಲ್ಲೇದ
3) ಭಾಗ್ಯವಂತ
4) ಲಕ್ಕಣ್ಣ
5) ಎಸ್. ಡಿ. ಕೊಳ್ಳಿಯವರ

ಸಮ್ಮೇಳನದಲ್ಲಿ ಭಾಗವಹಿಸಿದ ಒಟ್ಟು ಪ್ರತಿನಿಧಿಗಳು 185. ಜಿಲ್ಲಾವಾರು ವಿವರ ಇಂತಿದೆ.

1) ದ. ಕ. ಜಿಲ್ಲೆ	44	9) ಬೆಳಗಾಂ	3
2) ಬೆಂಗಳೂರು	33	10) ಗುಲ್‌ಬರ್ಗಾ	3
3) ಕೋಲಾರ	61	11) ಬೀದರ್	3
4) ಬಿಜಾಪುರ	9	12) ಚಿತ್ರದುರ್ಗ	2
5) ರಾಯಚೂರು	7	13) ಮೈಸೂರು	1
6) ದಾರವಾಡ	7	14) ಶಿವಮೊಗ್ಗ	1
7) ತುಮಕೂರು	6	15) ಉತ್ತರ ಕನ್ನಡ	1
8) ಕೊಡಗು	4		

ಸಮ್ಮೇಳನದಲ್ಲಿ ಭಾಗವಹಿಸಿದವರಲ್ಲಿ ಮೂವರು ಮಹಿಳಾ ಪ್ರತಿನಿಧಿಗಳೂ ಸೇರಿದ್ದಾರೆ.

ಕ್ರೆಡೆನ್ಷಿಯಲ್ ವರದಿ

ವಿದ್ಯಾರ್ಹತೆ :

ಅವಿದ್ಯಾವಂತರು	16
5ನೇ ತರಗತಿಗಿಂತ ಕೆಳಗಿನವರು	35
6ರಿಂದ 9ನೇ ತರಗತಿಯವರು	40
ಎಸ್.ಎಸ್.ಎಲ್.ಸಿ. ಆದವರು	24
ಪಿ.ಯು ಸಿ. ಆದವರು	12
ಪದವೀಧರರು	18
ಉನ್ನತ ಶಿಕ್ಷಣ ಪಡೆದವರು	12

ವಯಸ್ಸು :

20 ವರ್ಷದೊಳಗಿನವರು	4
20 ರಿಂದ 29 ರ ವರೆಗೆ	36
30 ರಿಂದ 39 ರ ವರೆಗೆ	54
40 ರಿಂದ 49 ರ ವರೆಗೆ	27
50 ರಿಂದ 59 ರ ವರೆಗೆ	25
60 ರಿಂದ 69 ರ ವರೆಗೆ	10
70 ಕ್ಕೆ ಮೇಲ್ಪಟ್ಟವರು	1

ಅತ್ಯಂತ ಹಿರಿಯ ಪ್ರತಿನಿಧಿ : ಕಾಂ। ಮುನಿರಂಗಯ್ಯ (ಬೆಂಗಳೂರು ಜಿಲ್ಲೆ)

ಅತ್ಯಂತ ಕಿರಿಯ ಪ್ರತಿನಿಧಿ : ಕಾಂ। ಎ. ಎಂ. ಮುನಿಕೃಷ್ಣಪ್ಪ (ಕೋಲಾರ)

ಸಂಘಟನೆಗೆ ಸೇರಿದ ಅವಧಿ :

1964 ಕ್ಕಿಂತ ಹಿಂದಿನಿಂದಲೂ ರೈತ ಸಂಘದಲ್ಲಿರುವವರು 37 ಜನ

1965 ರಿಂದ 1978 ರ ಮಧ್ಯೆ ಸೇರಿದವರು 65 ಜನ

1978 ರಿಂದೀಚೆಗೆ ಸೇರಿದವರು 57 ಜನ

ಜೈಲುವಾಸ :

ಒಂದು ತಿಂಗಳಿಗಿಂತ ಕಡಿಮೆ ಜೈಲುವಾಸ ಅನುಭವಿಸಿದವರು 37 ಜನ

ಒಂದು ತಿಂಗಳ ಮೇಲೆ ಒಂದು ವರ್ಷದ ಒಳಗೆ 11 ಜನ

ವರ್ಷಕ್ಕಿಂತ ಹೆಚ್ಚು ಜೈಲುವಾಸ ಅನುಭವಿಸಿದವರು 4 ಜನ

ಪ್ರತಿನಿಧಿಗಳಲ್ಲಿ ಅತ್ಯಂತ ಹೆಚ್ಚು ಅವಧಿ ಜೈಲುವಾಸ (ಆರೂವರೆ ವರ್ಷ) ಅನುಭವಿಸಿದವರು : ಕಾಂ। ಎನ್. ಕೆ. ಉಪಾಧ್ಯಾಯರು

ವರ್ಗಹಿನ್ನೆಲೆ :

ಶ್ರೀಮಂತ ರೈತ ಕುಟುಂಬದಿಂದ	3 ಜನ
ಮಧ್ಯಮರೈತವರ್ಗದಿಂದಬಂದವರು	58
ಸಣ್ಣರೈತವರ್ಗದಿಂದ ಬಂದವರು	59
ಕೃಷಿ ಕಾರ್ಮಿಕರು	21 ಜನ
ಕೈಗಾರಿಕಾ ಕಾರ್ಮಿಕರು	16 ಜನ

ಲೇಖಾಂಕ–3

ಪಕ್ಷದ ೧೧ ನೇ ಅಧಿವೇಶನದ ಕುರಿತು

—ವಿ.ಜೆ.ಕೆ. ನಾಯಕ್

[11ನೇ ಅಧಿವೇಶನದ ಯಶಸ್ವೀ ಮುಕ್ತಾಯಕ್ಕೆ ಸಂಬಂಧಪಟ್ಟಂತೆ ಕಾಂ| ವಿ. ಜೆ.ಕೆ. ನಾಯರ್ ಈ ಲೇಖಾಂಕಗಳನ್ನು ಬರೆಯುತ್ತಿದ್ದಾರೆ. ಸಂಬಂಧಪಟ್ಟ ಸೈದ್ಧಾಂತಿಕ ಪ್ರಶ್ನೆಗಳ ಕಡೆಗೆ ಗಮನಸೆಳೆದು ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಈ ಅಧಿವೇಶನದ ನಿರ್ಣಯಗಳ ಸತ್ವವನ್ನು ಮೈಗೂಡಿಸಿಕೊಳ್ಳಲು ಅನುಕೂಲವಾಗುವ ಉದ್ದೇಶದಿಂದ ಅವರು ಈ ಲೇಖನಗಳನ್ನು ಬರೆಯುತ್ತಿದ್ದಾರೆ. ಮೊದಲ ಲೇಖನ (ಐಕ್ಯರಂಗ, 21 ಫೆಬ್ರವರಿ 82)ದಲ್ಲಿ ಅವರು ಅಂತರ್ರಾಷ್ಟ್ರೀಯ ಪ್ರಶ್ನೆಗಳನ್ನು ಚರ್ಚಿಸಿದ್ದರು. ಎರಡನೇ ಲೇಖನ (ಐಕ್ಯರಂಗ, 14 ಮಾರ್ಚ್ 82)ದಲ್ಲಿ ರಾಷ್ಟ್ರೀಯ ಧೋರಣೆ (ಅಂದರೆ ಪಕ್ಷದ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ) ಆಧಾರಭೂತ ವಿಷಯಗಳ ಬಗ್ಗೆ ಹಾಗೂ ಈ ರಾಷ್ಟ್ರೀಯ ನಿಲುವಿಗೂ ಅಂತರಾಷ್ಟ್ರೀಯ ನಿಲುವಿಗೂ ಇರುವ ಸಂಬಂಧಗಳ ಬಗ್ಗೆ ಚರ್ಚಿಸಲಾಯಿತು. ಈ ಮೂರನೇ ಲೇಖನ ಎಡ ಹಾಗೂ ಪ್ರಜಾಪ್ರಭುತ್ವ ರಂಗದ ಕುರಿತಾಗಿದೆ. ಇನ್ನೂ ಕೆಲವು ಲೇಖಾಂಕಗಳು ಈ ಸರಣಿಯಲ್ಲಿ ಬರಲಿವೆ.]

ಎಡ ಹಾಗೂ ಪ್ರಜಾಪ್ರಭುತ್ವ ರಂಗ ಎಂಬುದು ಪಕ್ಷದ 7ನೇ ಅಧಿವೇಶನ (ಕಲ್ಕತ್ತಾ, 1964) ಪಕ್ಷದ ಕಾರ್ಯಕ್ರಮವನ್ನು ಅಂಗೀಕರಿಸಿದ ನಂತರ ಪಕ್ಷ ಅಂಗೀಕರಿಸಿರುವ ಒಂದು ಮಧ್ಯವರ್ತೀ ಕಾರ್ಯ ನೀತಿ.

ಪಕ್ಷದ ಕಾರ್ಯಕ್ರಮದಲ್ಲಿ ಕ್ರಾಂತಿಗಾಗಿ ಚಿತ್ರಿಸಿದ ಕಾರ್ಯನೀತಿಯ ರಂಗವೆಂದರೆ 'ಜನತಾ ಪ್ರಜಾಪ್ರಭುತ್ವ ರಂಗ' ಕಳೆದ ಲೇಖಾಂಕದಲ್ಲಿ ನಮ್ಮ ಪಕ್ಷ ಹೇಗೆ 'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ'ವನ್ನು ಒಪ್ಪಿಕೊಳ್ಳಲಿಲ್ಲವೆಂಬುದನ್ನು ಪರಿಶೀಲಿಸಿದ್ದೇವೆ. 'ಜನತಾ ಪ್ರಜಾಪ್ರಭುತ್ವ ರಂಗ' ಹಾಗೂ 'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ' ಇವೆರಡರ ನಡುವಿನ ಮುಖ್ಯ ವ್ಯತ್ಯಾಸವಿದು— 'ಜನತಾ ಪ್ರಜಾಪ್ರಭುತ್ವ ರಂಗ'ಕ್ಕೆ ಕಾರ್ಮಿಕ ವರ್ಗದ ನಾಯಕತ್ವವಿರುತ್ತದೆ ಹಾಗೂ ಕಾರ್ಮಿಕ ವರ್ಗ ಮತ್ತು ರೈತರ ಸಖ್ಯ ಇದರ ಅಂತಸ್ಸತ್ವ. ಆದರೆ 'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ'ದ ಉದ್ದೇಶ ಕಾರ್ಮಿಕ ವರ್ಗದ ನಾಯಕತ್ವವಲ್ಲ. ಬೂರ್ಜ್ವಾ ವರ್ಗದೊಡನೆ ಅಧಿಕಾರ ಹಂಚಿಕೊಳ್ಳುವುದಷ್ಟೇ ಅದರ ಉದ್ದೇಶ. ಈ ಎರಡು ರಂಗಗಳ ಅಂಗರಚನೆ ಒಂದೇ ಆಗಿರುತ್ತದೆ. ಆದರೆ ಮುಖ್ಯ ವ್ಯತ್ಯಾಸವಿರುವುದು ನಾಯಕತ್ವದಲ್ಲಿ ಮತ್ತು ತತ್ಕಾರಣವಾಗಿ ಬದಲಾವಣೆಯ ಪ್ರೇರಕ ಶಕ್ತಿಯಲ್ಲಿ. 'ಜನತಾ ಪ್ರಜಾಪ್ರಭುತ್ವ ರಂಗ'ದ ಪರಿಕಲ್ಪನೆಯಲ್ಲಿ ನಾಯಕತ್ವ ಕಾರ್ಮಿಕ ವರ್ಗದ್ದಿರುತ್ತದೆ; ಪ್ರಭುತ್ವ ದುಡಿಯುವ ಜನತೆಯದ್ದಾಗಿರುತ್ತದೆ; ಅದು ಸಮಾಜವಾದವನ್ನು ಅಭಿವೃದ್ಧಿಪಡಿಸಿ ಪರಿವರ್ತನೆಯನ್ನು ಪೂರ್ಣಗೊಳಿಸಬಲ್ಲದು. ಕೇವಲ ಅಧಿಕಾರದಲ್ಲಿ ಪಾಲುಗಾರಿಕೆಯ ಉದ್ದೇಶವನ್ನಷ್ಟೇ ಹೊಂದಿರುವ 'ರಾಷ್ಟ್ರೀಯ ಪ್ರಜಾಪ್ರಭುತ್ವ ಂಗರ'ದ ಪರಿಕಲ್ಪನೆಯ ಪ್ರಕಾರ ಭಾರತದಲ್ಲಿನ ಪರಿಸ್ಥಿತಿಯಲ್ಲಿ ಸಮಾಜವಾದದೆಡೆಗೆ ಪರಿವರ್ತನೆ ಸಾಧ್ಯವಿಲ್ಲ ಮಾತ್ರವಲ್ಲ, ಅದರ ಏಕಮಾತ್ರ ಪರಿಣಾಮವೆಂದರೆ ಬೂರ್ಜ್ವಾ ವರ್ಗದ ಬಾಲಂಗೋಚಿಯಾಗುವುದು.

ಎರಡು ಭಿನ್ನ ಕಾರ್ಯಕ್ರಮಗಳು

ಈ ಎರಡು ಕಾರ್ಯಕ್ರಮಗಳು ಸ್ವಾಭಾವಿಕವಾಗಿಯೇ ಆಚರಣೆಯಲ್ಲಿ ಪ್ರಜಾಪ್ರಭುತ್ವ ಯಂತ್ರದ ಕುರಿತಾದ ನಿಲುವಿನ ಬಗ್ಗೆ, ಕಾಂಗ್ರೆಸ್ ಸರ್ಕಾರದ ಬಗ್ಗೆ ಹಾಗೂ ರಾಜಕೀಯಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಲಕ್ಷಣಗಳನ್ನು ಹೊಂದಿವೆ. ಜನತಾ ಪ್ರಜಾಪ್ರಭುತ್ವ ರಂಗದ ಉದ್ದೇಶ ಪ್ರಭುತ್ವ ಮಂತ್ರವನ್ನು ಧ್ವಂಸಮಾಡಿ ಕಾರ್ಮಿಕವರ್ಗದ ನೇತೃತ್ವದಲ್ಲಿ ಕಾರ್ಮಿಕ-ರೈತ ಸಖ್ಯವನ್ನು ಮುಖ್ಯ ಸತ್ವವನ್ನಾಗಿಟ್ಟುಕೊಂಡು, ಇತರ ಎಲ್ಲಾ ವರ್ಗಗಳ ಜನವಿಭಾಗಗಳು (ಊಳಿಗ ಮಾನ್ಯ ಪದ್ಧತಿ, ಗುತ್ತೇದಾರಿಕೆ ಹಾಗೂ ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿರುವ ಭೂರ್ಜ್ವಾ ವರ್ಗದ ವಿಭಾಗವನ್ನೂ ಸೇರಿದಂತೆ) ಜನರು ಭಾಗವಹಿಸಿರುವ ಪ್ರಭುತ್ವವನ್ನು ಕಟ್ಟುವುದು. ಆದ್ದರಿಂದ ಜನತಾ ಪ್ರಜಾಪ್ರಭುತ್ವ ರಂಗದ ಆಳುವ ಪಕ್ಷ (ಮೊದಲಿಂದಲೂ ಕಾಂಗ್ರೆಸ್, ಜನತಾ ಪಕ್ಷ ಆಳ್ವಿಕೆ ನಡೆಸುವಾಗ ಅದನ್ನು)ವನ್ನು ಎಡೆಬಿಡದೆ ವಿರೋಧಿಸಿಕೊಂಡು ಬರುತ್ತದೆ. ಜನತಾ ಪ್ರಜಾಪ್ರಭುತ್ವ ರಂಗದ ಕಾರ್ಯಕ್ರಮದೊಂದಿಗೆ ಹೊಂದಿಕೊಳ್ಳುವ ಧೋರಣೆಗಳು ಮಾತ್ರ ಉದಾಹರಣೆಗೆ ವಿದೇಶೀ ಧೋರಣೆ ಇತ್ಯಾದಿಗಳು ಇದಕ್ಕೆ ಅಪವಾದ.

ಜನತಾ ಪ್ರಜಾಪ್ರಭುತ್ವ ರಂಗ ರಾಜಕೀಯದಲ್ಲಿ ಹಾಗೂ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರಶ್ನೆಗಳನ್ನು ಕಾರ್ಮಿಕ ವರ್ಗದ ದೃಷ್ಟಿಕೋನವಿಟ್ಟುಕೊಂಡು ಆಚರಣೆಯಲ್ಲಿ ಬಗೆಹರಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ಕಾರ್ಯಕ್ರಮ ಸ್ವಾಭಾವಿಕವಾಗಿಯೇ ಸದ್ಯ ಇರುವ ರಾಜ್ಯ ಪ್ರಜಾಪ್ರಭುತ್ವ ಯಂತ್ರವನ್ನು ಧ್ವಂಸಮಾಡುವ ಉದ್ದೇಶ ಹೊಂದಿಲ್ಲ. ಅದರ ಉದ್ದೇಶ ರಾಷ್ಟ್ರೀಯ ಭೂರ್ಜ್ವಾ ವರ್ಗದೊಂದಿಗೆ ಅಧಿಕಾರದಲ್ಲಿ ಪಾಲು ಪಡೆಯುವುದು ಮಾತ್ರ. ಅದು ಆಳುವ ಪಕ್ಷಕ್ಕೆ ವಿರೋಧ ವ್ಯಕ್ತಪಡಿಸುವಲ್ಲಿ ಒಂದು ಸುಸಂಗತವಾದ ಧೋರಣೆ ಹೊಂದಿಲ್ಲ. ಆಳುವ ಪಕ್ಷ ತನ್ನ ಅಧಿಕಾರ ಹಂಚಿಕೊಳ್ಳಲು ಒಪ್ಪದಿದ್ದಾಗ (ಅಂದರೆ ಆಳುವ ವರ್ಗಗಳು ವರ್ಗ ಸಹಕಾರದ ಪ್ರಸ್ತಾಪವನ್ನು ತಿರಸ್ಕರಿಸಿದಾಗ) ಮಾತ್ರ ಅದು ಆಳುವ ಪಕ್ಷವನ್ನು ವಿರೋಧಿಸುತ್ತದೆ. ಆದ್ದರಿಂದ 'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ' ಆಚರಣೆಯ ಮಟ್ಟದಲ್ಲಿ ರಾಜಕೀಯ ವಿಷಯಗಳಲ್ಲಿ ಹಾಗೂ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾದ ಎಲ್ಲಾ ಪ್ರಶ್ನೆಗಳನ್ನು ಕುರಿತು ಸಮಯಸಾಧಕ ನಿಲುವು ತಳೆಯಬಹುದು.

ಮಧ್ಯವರ್ತಿ ಘೋಷಣೆಗಳು

ಆದರೆ, ಈ ಹಿಂದಿನ ಲೇಖನದಲ್ಲಿ ಸೂಚಿಸಿರುವಂತೆ 'ಜನತಾ ಪ್ರಜಾಪ್ರಭುತ್ವ ರಂಗ'ದ ಪರಿಕಲ್ಪನೆ ತಕ್ಷಣ ಕಾರ್ಯಸಾಧ್ಯವಾದ ಪರಿಕಲ್ಪನೆಯಲ್ಲವಾದ್ದರಿಂದ ಇಂತಹ ರಂಗವನ್ನು ರಚಿಸುವ ದಿಕ್ಕಿನಲ್ಲಿ ವಿವಿಧ ಮಧ್ಯವರ್ತೀ ಘೋಷಣೆಗಳನ್ನು ಪಕ್ಷ ಪ್ರತಿಪಾದಿಸಬೇಕಾಗುತ್ತದೆ. ಇದು ಯಾಕೆಂದರೆ ಜನತಾ ಪ್ರಜಾಪ್ರಭುತ್ವ ರಂಗ ಕೇವಲ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಮಾತ್ರ ಮೂಡಿಬರಲು ಸಾಧ್ಯ. ಅಂದರೆ ಕಾರ್ಮಿಕ ವರ್ಗ ಒಂದು ಕ್ರಾಂತಿಕಾರೀ ಪ್ರಜ್ಞೆ ಗಳಿಸಿಕೊಳ್ಳಬೇಕು. ಅದು ಸಂಘಟನೆಗೊಂಡಿರುವ ವಿವಿಧ ಸಾಮೂಹಿಕ ಸಂಘಟನೆಗಳು ಹಾಗೂ ಪಕ್ಷ ಮತ್ತು ಇವೆಲ್ಲದರ ಐಕ್ಯತೆ ಇತ್ಯಾದಿಯೆಲ್ಲಾ ಪ್ರಾಬಲ್ಯದ ಲಕ್ಷಣ ಹೊಂದಬೇಕು. ಕಾರ್ಮಿಕ ವರ್ಗ ಹಾಗೂ ರೈತಾಪಿ ವರ್ಗಗಳು ತಮ್ಮ ಮೇಲಿನ ಶೋಷಣೆಯನ್ನು ಕೊನೆಗಾಣಿಸಬೇಕಾದರೆ ಪರಸ್ಪರ ಸಹಾಯ ಮಾಡಬೇಕು, ಹಾಗೂ ಇಬ್ಬರಿಗೂ ಶತ್ರುವಾಗಿರುವ ಶೋಷಕ ವರ್ಗಗಳ ವಿರುದ್ಧ ಹೋರಾಡಬೇಕು ಎಂಬ ಪ್ರಜ್ಞೆ ಮೂಡಿ ಕಾರ್ಮಿಕ ರೈತ ಸಖ್ಯ ಹುಟ್ಟಬೇಕು. ಬೂರ್ಜ್ವಾ ವರ್ಗವೂ ಸೇರಿದಂತೆ ಎಲ್ಲಾ ಜನ ವಿಭಾಗಗಳೂ ತಮ್ಮ ಸ್ವಂತ ಹಿತಾಸಕ್ತಿ ಹಾಗೂ ದೇಶದ ಹಿತಾಸಕ್ತಿಗಾಗಿ ಕಾರ್ಮಿಕ ಹಾಗೂ ರೈತಾಪಿ ವರ್ಗದೊಂದಿಗೆ ಸಹಕರಿಸಬೇಕೆಂಬ ಪ್ರಜ್ಞೆ ಇತ್ಯಾದಿಯೆಲ್ಲಾ ಜನತಾ ಪ್ರಜಾಪ್ರಭುತ್ವ ರಂಗ ಮೂಡಿಬರಲು ಅವಶ್ಯಕ. ಸದ್ಯದ ಹಂತದಲ್ಲಿ ಕಾರ್ಮಿಕ ವರ್ಗದ ಈ ರೀತಿಯ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಐಕ್ಯತೆಯನ್ನು ನಾವು ಸಾಧಿಸಿಲ್ಲ. ಕಾರ್ಮಿಕ ವರ್ಗದ ಸಂಘಟನೆಗಳು, ಅವುಗಳ ಐಕ್ಯತೆ ಹಾಗೂ ಇವೆಲ್ಲಕ್ಕೂ ಹೆಚ್ಚಾಗಿ ಕ್ರಾಂತಿಕಾರೀ ವರ್ಗ ಪ್ರಜ್ಞೆ ಇತ್ಯಾದಿ ಇನ್ನೂ ಅಪೇಕ್ಷಿತ ಮಟ್ಟದವರೆಗೆ ಬೆಳೆದಿಲ್ಲ. ಆದರೆ ಇಂತಹ ಬೆಳವಣಿಗೆಯ ಪ್ರಕ್ರಿಯೆಯನ್ನು ಆಳುವ ಪಕ್ಷ ಹಾಗೂ ಸರಕಾರ ಅನುಸರಿಸುತ್ತಿರುವ ವರ್ಗ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಆರಂಭಿಸಲು ಸಾಧ್ಯ. ಆಳುವ ಪಕ್ಷ ಒಂದೆಡೆ ಕಾರ್ಮಿಕ ವರ್ಗ ಹಾಗೂ ಇತರ ದುಡಿಯುವ ಜನತೆ ಗಳಿಸಿದ ಕೆಲವು ಸೌಲಭ್ಯಗಳ ಮೇಲೆ ಪ್ರಹಾರ ನಡೆಸುತ್ತಿದ್ದರೆ ಇನ್ನೊಂದೆಡೆ ಪ್ರಜಾಪ್ರಭುತ್ವ ಹಕ್ಕಿನ ಮೇಲೆ ಹಲ್ಲೆ ನಡೆಸುತ್ತಿದೆ. ಆದರೆ ಕಾರ್ಮಿಕ ವರ್ಗದ ಐಕ್ಯತೆ ಹಾಗೂ ಸಂಘಟನೆಯ ಪ್ರಶ್ನೆಯೇ ಆಳುವ ಪಕ್ಷದ ಧೋರಣೆ ಹಾಗೂ ಆಚರಣೆಗಳ ವಿರುದ್ಧ ನಡೆಸುವ ಹೋರಾಟದೊಂದಿಗೆ ಸಂಬಂಧ ಹೊಂದಿದೆ.

ಎಡ–ಪ್ರಜಾಪ್ರಭುತ್ವ ರಂಗ

ಕಾರ್ಮಿಕ ವರ್ಗದ ಪಕ್ಷ ಸರ್ವಾಧಿಕಾರೀ ಶಕ್ತಿಗಳಿಗೆ ವಿರೋಧವನ್ನು ಹಾಗೂ ಸಾಮಾಜಿಕ-ಆರ್ಥಿಕ ಪ್ರಯೋಜನಗಳಿಗಾಗಿ ಹೋರಾಟವನ್ನು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಮಾತ್ರವೇ ನಡೆಸಬೇಕಾಗಿಲ್ಲ; ಆಳುವ ಪಕ್ಷದ ತಪ್ಪು ಧೋರಣೆಗಳಿಗೆ ವಿರುದ್ಧವಾಗಿರುವ ಎಲ್ಲಾ ವರ್ಗಗಳು, ವಿಭಾಗಗಳು ಹಾಗೂ ದರ್ಜೆಗಳು ಜನರೊಂದಿಗೆ ಸಖ್ಯ ಬೆಳೆಸಿ ಈ ಹೋರಾಟ ನಡೆಸಬೇಕಾಗುತ್ತದೆ.

ಪಕ್ಷ ಕಾಂಗ್ರೆಸ್ಸನ್ನಾಗಲೀ, ಜನತಾ ಪಕ್ಷವನ್ನಾಗಲೀ ಬೆಂಬಲಿಸಲು ಸಾಧ್ಯವಿಲ್ಲ. ಯಾಕೆಂದರೆ ಈ ಎರಡೂ ಪಕ್ಷಗಳ ವರ್ಗಸ್ವಭಾವ ಕಾರ್ಮಿಕ ವರ್ಗ ಹಾಗೂ ಇದರ ದುಡಿಯುವ ಜನತೆಯ ಮೇಲೆ ಪ್ರಹಾರ ನಡೆಸುವ ಸರ್ವಾಧಿಕಾರವನ್ನು ಬೆಳೆಸುವ ದಾರಿಯಲ್ಲೇ ಅದನ್ನು ಕೊಂಡೊಯ್ಯುತ್ತವೆ. ಆದ್ದರಿಂದಲೇ ನಮ್ಮ ಪಕ್ಷ ಹತ್ತನೇ ಅಧಿವೇಶನ (ಜಲಂಧರ್, 1918)ದ ರಾಜಕೀಯ ನಿರ್ಣಯದಲ್ಲಿ ಪ್ರತಿಪಾದಿಸಿದ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಪರಿಕಲ್ಪನೆಯನ್ನು ಅಂಗೀಕರಿಸಿತು.

ಎಡ–ಪ್ರಜಾಪ್ರಭುತ್ವ ರಂಗ ಎಂಬುದು ಜನತಾ ಪ್ರಜಾಪ್ರಭುತ್ವ ರಂಗಕ್ಕಿಂತ ಮೊದಲಿನ ಮಜಲು. ಎಡ-ಪ್ರಜಾಪ್ರಭುತ್ವ ರಂಗ ಕಾರ್ಮಿಕ ವರ್ಗದ ನಾಯಕತ್ವದ ಪೂರ್ವ ಶರತ್ತನ್ನು ಹಾಕುವುದಿಲ್ಲ. ಈ ರಂಗ ಆಳುವ ಪಕ್ಷ ಅಥವಾ ಪಕ್ಷಗಳ ಧೋರಣೆಗಳಿಗೆ ವಿರುದ್ಧವಾಗಿರುವ ಎಲ್ಲಾ ವರ್ಗಗಳ ಎಲ್ಲಾ ವಿಭಾಗಗಳ ಜನರಿರುವ ರಂಗ ಎಂದು ಇರುವುದರಿಂದ ಆಳುವ ಪಕ್ಷದ ಇಂತಹ ಧೋರಣೆಗಳ ವಿರುದ್ಧ ಹೋರಾಟ ಹಾಗೂ ಅವುಗಳನ್ನು ಸೋಲಿಸುವ ಹೋರಾಟ ವರ್ಗ ಶಕ್ತಿಗಳ ಸಹಸಂಬಂಧಗಳನ್ನು ಕಾರ್ಮಿಕ ವರ್ಗಕ್ಕೆ ಪ್ರಯೋಜನವಾಗುವ ತೆರದಲ್ಲಿ ಬದಲಿಸಿಯೇ ಬದಲಿಸುತ್ತದೆ. ಮತ್ತು ಆ ಮೂಲಕ ಜನತಾ ಪ್ರಜಾಪ್ರಭುತ್ವ, ತದನಂತರ ಸಮಾಜವಾದದೆಡೆಗೆ ಮುನ್ನಡೆಯಲು ಸಾಧ್ಯವಾಗುತ್ತದೆ. ಈ ರೀತಿಯಲ್ಲಿ ಎಡ-ಪ್ರಜಾಪ್ರಭುತ್ವ ರಂಗ 'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ'ದ ಪರಿಕಲ್ಪನೆಗಿಂತ ಭಿನ್ನವಾದುದು. 'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ' ಹಾಗೂ ಜನತಾ ಪ್ರಜಾಪ್ರಭುತ್ವರಂಗ'ದ ಪ್ರಮುಖ ವ್ಯತ್ಯಾಸವೆಂದರೆ ಕಾರ್ಮಿಕ ವರ್ಗದ ನಾಯಕತ್ವದ ಪ್ರಶ್ನೆಯೆಂದು ಹೇಳಿ ಎಡ-ಪ್ರಜಾಪ್ರಭುತ್ವ ರಂಗದಲ್ಲಿ ಕಾರ್ಮಿಕ ವರ್ಗದ ನಾಯಕತ್ವ ಅವಶ್ಯಕವೇನಲ್ಲ ಎಂದು ಹೇಳುವಾಗ ಈ ಭಿನ್ನತೆಯನ್ನು ಜಾಗರೂಕತೆಯಿಂದ ಗಮನಿಸಬೇಕು.

(ಮುಂದುವರಿಯುವುದು)

ಕಾಳಸಂತೆಖೋರರ ವಿಚಾರಣೆಗಾಗಿ ವಿಶೇಷ ಕೋರ್ಟುಗಳು

ಕೃತ್ರಿಮ ಅಭಾವ ಸೃಷ್ಟಿಸಿ, ಜನತೆಯ ದೈನಂದಿನ ಜೀವನಕ್ಕೆ ಕುಠಾರಪ್ರಾಯರಾಗಿರುವ ಕಾಳಸಂತೆಖೋರರನ್ನು ವಿಚಾರಣೆ ಮಾಡಿ ಕ್ರಮ ಕೈಕೊಳ್ಳಲು ಪ. ಬಂಗಾಲ ಎಡರಂಗ ಸರ್ಕಾರವು 22 ವಿಶೇಷ ಕೋರ್ಟುಗಳನ್ನು ಏಪ್ರಿಲ್ 1, 1982 ರಿಂದ ಪ್ರಾರಂಭ ಮಾಡಲಿದೆ.

ಕಾಳಸಂತೆಕೋರರ ವಿಚಾರಣೆ ಮಾತ್ರ ಸೀಮಿತವಾಗಿರುವ ಈ ನ್ಯಾಯಾಲಯಗಳಲ್ಲಿ ಕಾಳಸಂತೆ ಕದೀಮರ ಜಾಮೀನು ಅರ್ಜಿಗಳನ್ನು ಪರಿಸ್ಕರಿಸುವುದಿಲ್ಲ. ಮತ್ತು ಅಪರಾಧಿ ಎಂದು ಸಾಬೀತಾದಲ್ಲಿ ಕನಿಷ್ಠ ಮೂರು ತಿಂಗಳು ಶಿಕ್ಷೆ ವಿಧಿಸಲಾಗುವುದು.

ಐಕ್ಯರಂಗ

ಚಂದಾ ವಿವರ

ಬಿಡಿ ಪ್ರತಿ	: 60 ಪೈಸೆ
6 ತಿಂಗಳಿಗೆ	: 15 ರೂ.
ವಾರ್ಷಿಕ ಚಂದಾ	: 30 ರೂ.

ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

ಬಡವರ ಬೆನ್ನು ಮುರಿಯುವ ಕೇಂದ್ರ ಮುಂಗಡ ಪತ್ರ

ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಪ್ರಭಾವ :

ನಮ್ಮ ದೇಶದ ವಿದೇಶಿ ವ್ಯಾಪಾರದ ಕೊರತೆಯಿಂದಾಗಿ ಸಂಭವಿಸಿದ ವಿದೇಶಿ ವಿನಿಮಯ ಸಮಸ್ಯೆಯನ್ನು ನೀಗಿಸಲು ಇಂದಿರಾ ಸರಕಾರ ಸಾರ್ವಜನಿಕ ಅಭಿಪ್ರಾಯದ ವಿರುದ್ಧ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಯಿಂದ ರೂ. 5000 ಕೋಟಿಯಷ್ಟು ಸಾಲ ಪಡೆಯಲು ನಿಶ್ಚೈಸಿತು. ಅಂದಿನಿಂದ ನಮ್ಮ ದೇಶದ ಆರ್ಥಿಕ ಧೋರಣೆಯಲ್ಲಿ ಈ ಸಂಸ್ಥೆಯ ಹಸ್ತಕ್ಷೇಪ ಹೆಚ್ಚುತ್ತಿದೆ. ಈ ಸಂಸ್ಥೆಯ ಮತ್ತು ಜಾಗತಿಕ ಬ್ಯಾಂಕಿನ ತಜ್ಞರ ತಂಡವು ಕೇಂದ್ರದ ಮುಂಗಡ ಪತ್ರ ಸಿದ್ಧಗೊಳಿಸುವ ಕಾಲದಲ್ಲಿ ಭಾರತಕ್ಕೆ ಭೇಟಿ ಕೊಟ್ಟದ್ದನ್ನು ಗಮನಿಸಬೇಕು. ಈ ತಜ್ಞರ ನಿರ್ದೇಶನದಂತೆಯೇ 1982-83 ರ ಕೇಂದ್ರ ಮುಂಗಡ ಪತ್ರವನ್ನು ಸಿದ್ಧಪಡಿಸಲಾಗಿದೆ. ಈ ಸಂಸ್ಥೆಗಳ ಪ್ರಭಾವವು ನಮ್ಮ ದೇಶದ ಆರ್ಥಿಕ ಧೋರಣೆಗಳ ಮೇಲೆ ಇನ್ನೂ ಹತ್ತು ವರ್ಷಗಳ ಕಾಲ ಇರುವುದು! ದೇಶದ ಸ್ವಾತಂತ್ರ್ಯ, ಸ್ವಾಯತ್ತತೆ ಹಾಗೂ ಸಾರ್ವಭೌಮತೆಯನ್ನು ವಿದೇಶಿ ಹಣಕಾಸು ಸಂಸ್ಥೆಗಳಿಗೆ ಇಂದಿರಾ ಸರಕಾರ ಮಾರಿಕೊಂಡಿದೆ !

ಭಾರೀ ಮೊತ್ತದ ಸಾಲ ಕೊಟ್ಟ ಈ ವಿದೇಶಿ ಹಣಕಾಸು ಸಂಸ್ಥೆಗಳು ಜಪಾನ್, ಅಮೇರಿಕಾ ಮತ್ತು ಪ. ಯೂರೋಪಿನ ಬಂಡವಾಳಶಾಹಿ ರಾಷ್ಟ್ರಗಳ ಹಿತಾಸಕ್ತಿಗಳಿಗನುಗುಣವಾಗಿ ಕಲಸ ಮಾಡುತ್ತವೆ. ಖಾಸಗೀ ಕ್ಷೇತ್ರದಲ್ಲಿ ಉಳಿತಾಯ, ಬಂಡವಾಳ ಹೂಡುವಿಕೆ, ಉತ್ಪಾದನೆ ಹಾಗೂ ವಿತರಣೆಗಳಿಗೆ ವಿಶೇಷ ಸೌಲಭ್ಯ, ಸಾರ್ವಜನಿಕ ರಂಗದ ಸಾಮಗ್ರಿಗಳ ಮತ್ತು ಸೇವಾ ಸೌಲಭ್ಯಗಳ ಬೆಲೆಏರಿಕೆ ಸರ್ಕಾರದ ವೆಚ್ಚದಲ್ಲಿ ಕಡಿತ, ಆಂತರಿಕ ಮಾರುಕಟ್ಟೆಗಿಂತಲೂ ರಫ್ತು ವ್ಯಾಪಾರಕ್ಕೆ ಹೆಚ್ಚು ಪ್ರೋತ್ಸಾಹ, ಸಡಿಲು ಆಮದು ನೀತಿ, ವಿದೇಶಿಯರ ಗಳಿಕೆಯನ್ನು ತಮ್ಮ ಸ್ವದೇಶಕ್ಕೆ ರವಾನಿಸಲು ಹೆಚ್ಚಿನ ಸೌಲಭ್ಯ, ಬಹುರಾಷ್ಟ್ರೀಯ ಸಂಸ್ಥೆಗಳೊಂದಿಗೆ ಭಾರತದ ಏಕಸ್ವಾಮ್ಯ ಸಂಸ್ಥೆಗಳ ಸಹಕಾರ, ಸಹೋದ್ಯೋಗಿಗಳಿಗೆ ಪ್ರೋತ್ಸಾಹ, ಇವೇ ಮೊದಲಾದವುಗಳು ಈ ವಿದೇಶಿ ಹಣಕಾಸು ಸಂಸ್ಥೆಗಳು ಪ್ರತಿಪಾದಿಸುತ್ತಿರುವುದು. ಇದರಿಂದಾಗಿ, ಬಂಡವಾಳಶಾಹಿಗಳು, ಏಕಸ್ವಾಮ್ಯ ಕೈಗಾರಿಕಾ ಸಂಸ್ಥೆಗಳು, ದೊಡ್ಡ ಭೂಮಾಲಿಕರು, ಎಸ್ಟೇಟುದಾರರು, ಸಗಟು ವ್ಯಾಪಾರಸ್ಥರು, ಕಂಟ್ರಾಕ್ಟುದಾರರು, ಅಧಿಕಾರಿಗಳು, ರಾಜಕೀಯ ಪುಡಾರಿಗಳು, ಕಳ್ಳಸಂತೆ ಕದೀಮರೂ ಕಪ್ಪು ಹಣ ಸಂಗ್ರಾಹಕರೂ ಇನ್ನಷ್ಟು ಬಲಿಷ್ಠರಾಗುವರು. ಬಡತನ, ಅಸಮಾನತೆ, ನಿರುದ್ಯೋಗ, ಬೆಲೆ ಏರಿಕೆ, ಹಣದುಬ್ಬರ, ಆರ್ಥಿಕ ದುಃಸ್ಥಿತಿ, ಹರಾವಲಂಬನೆ ಹೆಚ್ಚಾಗುವುವು. ಜನರಲ್ಲಿ ಅತೃಪ್ತಿ, ಅಸಂತೋಷ ತಾಂಡವವಾಡುವುದು.

ರೂ. 1,300 ಕೋಟಿ ಹೊಸ ಕರಭಾರ :

ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಭಾರೀ ಪ್ರಮಾಣದ ಸಾಲ ಪಡೆಯಲು ನಿರ್ಧರಿಸಿದಂದಿನಿಂದ, ಕಳೆದ ಮೂರು ತಿಂಗಳುಗಳಲ್ಲಿ ಕೇಂದ್ರ ಸರ್ಕಾರವು ಹಂತಹಂತವಾಗಿ ಬೃಹತ್ ಪ್ರಮಾಣದಲ್ಲಿ ಅಪ್ರತ್ಯಕ್ಷ ತೆರಿಗೆಯ ಭಾರವನ್ನು ಜನಸಾಮಾನ್ಯರ ಮೇಲೆ ಹೇರುತ್ತಿದೆ. ಹೊಸ ಕರಭಾರದ ಮೊತ್ತವು ಈ ಅಲ್ಪಾವಧಿಯಲ್ಲಿಯೇ ರೂ. 1,300 ಕೋಟಿಗಳಷ್ಟಾಗಬಹುದು ! ಮಾಜಿ ರೈಲ್ವೆ ಮಂತ್ರಿ ಕೇದಾರ ಪಾಂಡೆ ರೈಲ್ವೆ ಸಾರಿಗೆ ದರಗಳನ್ನು ಡಿಸೆಂಬರ್ 81 ರಿಂದಲೇ ಹೆಚ್ಚಿಸಿ ರೂ. 300 ಕೋಟಿಯಷ್ಟು ಕರಭಾರ ಹೇರಿದರು. ಈಗಿನ ರೈಲ್ವೆ ಮಂತ್ರಿ ಪಿ. ಸಿ. ಸೇಠಿ ತನ್ನ 1982-83ನೇ ವರ್ಷದ ರೈಲ್ವೆ ಮುಂಗಡ ಪತ್ರದಲ್ಲಿ ಪುನಃ ರೈಲ್ವೆ ಸಾರಿಗೆ ಮತ್ತು ಸಂಚಾರಗಳ ದರಗಳನ್ನು ಹೆಚ್ಚಿಸಿ ರೂ. 267 ಕೋಟಿಯಷ್ಟು ಹೊಸ ಕರಭಾರ ಹೇರಿದರು. ಸಂಪರ್ಕ ಮಂತ್ರಿ ಸ್ಟೀಫನ್ ಅಂಚೆ ಮತ್ತು ತಂತಿ ಸೇವೆಗಳ ದರಗಳನ್ನು ಹೆಚ್ಚಿಸಿ ರೂ. 100 ಕೋಟಿಯಷ್ಟು ತೆರಿಗೆ ಹೇರಿದರು. ಈ ಎಲ್ಲ ಗಾಯಗಳಿಗೆ ಬರೆ ಕೊಟ್ಟಂತೆ, ಇಂದಿರಾ ಗಾಂಧಿಯ ಬಲಗೈ ಬಂಟ ಅರ್ಥ ಮಂತ್ರಿ ಪ್ರಣಬ ಮುಖರ್ಜಿ ತನ್ನ 1982-83ರ ವರ್ಷದ ಮೊದಲ ಮುಂಗಡ ಪತ್ರದಲ್ಲಿಯೇ ರೂ. 590 ಕೋಟಿಯಷ್ಟು ಹೊಸ ಕರಭಾರ ಹೇರಿರುವರು. ಇದರಲ್ಲಿ ರೂ. 196 ಕೋಟಿಯಷ್ಟು ಅಬಕಾರಿ ತೆರಿಗೆ (Excise duty) ಮತ್ತು ರೂ. 391 ಕೋಟಿಯಷ್ಟು ರಫ್ತು ಆಮದುಗಳ ಮೇಲಿನ ಸುಂಕದ ತೆರಿಗೆ (Customs duty). ಈಗಿನ ತೆರಿಗೆ ದರಗಳಲ್ಲಿ ಕೇಂದ್ರ ಸರ್ಕಾರದ ಕೊರತೆಯು ರೂ. 2,085 ಕೋಟಿಯಷ್ಟಾಗುವುದು. ಹೊಸ ತೆರಿಗೆಗಳಲ್ಲದೆ, ಶೇ. 7ರ ಬಡ್ಡಿ ದರದಲ್ಲಿ 10 ವರ್ಷಗಳ ನಂತರ ಮರುಪಾವತಿ ಮಾಡುವ 'ಬಂಡವಾಳ ಹೂಡುವಿಕೆಯ ವಿಶೇಷ ಬಾಂಡು'ಗಳನ್ನು ವಿಕ್ರಯಿಸಿ ರೂ. 250 ಕೋಟಿ ಸಂಗ್ರಹಿಸಲು ನಿಶ್ಚೈಸಲಾಗಿದೆ, ಇನ್ನೂ ರೂ. 1,365 ಕೋಟಿಯಷ್ಟು ಕೊರತೆ ಉಳಿಯುವುದು ! ಅಂದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಹೊಸ ತೆರಿಗೆ, ಸುಂಕ, ಕೃತಕ ಹಣ ಸೃಷ್ಟಿ, ಸಾರ್ವಜನಿಕ ಸಾಲ, ಇತ್ಯಾದಿಗಳನ್ನು ಜನಸಾಮಾನ್ಯರ ಮೇಲೆ ಹೊರಿಸಲಾಗುವುದು.

ಬಡವರ ಬೆನ್ನುಮುರಿಯುವ ಮುಂಗಡ ಪತ್ರ :

ಕೇಂದ್ರ ಮತ್ತು ರಾಜ್ಯಗಳು, ನಗರ ಸಭೆಗಳು, ಅಭಿವೃದ್ಧಿ ಮಂಡಳಿಗಳು, ಪಂಚಾಯತಿಗಳು ವಿಧಿಸುವ ತೆರಿಗೆಗಳ ಹೆಚ್ಚಿನ ಭಾರ ಬಡಜನರ ಮೇಲೆಯೇ ಬೀಳುವುದು. ಕಾರಣ, ಆರ್ಥಿಕ ಅಭಿವೃದ್ಧಿಗೆ, ಆಡಳಿತ ಹಾಗೂ ರಕ್ಷಣೆಗೆ ಸರ್ಕಾರ ಅವಲಂಬಿಸುತ್ತಿರುವುದು ಹೆಚ್ಚಾಗಿ ಅಪ್ರತ್ಯಕ್ಷ ತೆರಿಗೆಗಳನ್ನೇ. 1982-83 ರಲ್ಲಿ ಹೊಸ ತೆರಿಗೆಗಳೂ ಸೇರಿದಂತೆ ಒಟ್ಟು ರೂ. 18,248 ಕೋಟಿ ತೆರಿಗೆ ಹಣ ಸಂಗ್ರಹಿಸುವ ನಿರೀಕ್ಷೆ ಇದೆ. ಅದರಲ್ಲಿ ಸುಂಕ ರೂ. 5000 ಕೋಟಿ ಮತ್ತು ಅಬಕಾರಿ ತೆರಿಗೆ ರೂ 8,525 ಕೋಟಿ, ಒಟ್ಟು ರೂ 13,5 5 ಕೋಟಿ ಅಂದರೆ, ಒಟ್ಟು ತೆರಿಗೆ ಸಂಗ್ರಹದ ಶೇ. 74ರಷ್ಟು ಅಪ್ರತ್ಯಕ್ಷ ತೆರಿಗೆಗಳು ! ವರ್ಷ ವರ್ಷವೂ ಬಲಿಷ್ಠರಾಗುತ್ತಿರುವ ಆಸ್ತಿವಂತರ ಸಂಪತ್ತು ಮತ್ತು ಆದಾಯಗಳ ಮೇಲೆ ಕೈಗಾರಿಕಾ ಹಾಗೂ ವ್ಯಾಪಾರೀ ಸಂಸ್ಥೆಗಳ ಲಾಭಾದಾಯಗಳ ಮೇಲೆ ಪ್ರತ್ಯಕ್ಷ ತೆರಿಗೆಗಳು ತೀರಾ ಕಡಿಮೆ. 1982-83 ರಲ್ಲಿ ಸಂಗ್ರಹಿಸಲಿರುವ ಕಂಪನಿಗಳ ಮೇಲಿನ ತೆರಿಗೆ ರೂ. 2,382 ಕೋಟಿ (ಶೇ. 13) ಮತ್ತು ವೈಯಕ್ತಿಕ ಆದಾಯಗಳ ಮೇಲಿನ ತೆರಿಗೆ ರೂ. 1,574 ಕೋಟಿ (ಶೇ. 8.65). ರೂ. 20,000 ಕ್ಕೂ ಮಿಗಿಲಾಗಿರುವ ಕಪ್ಪು ಹಣವನ್ನು ಬಯಲಿಗೆಳೆಯಲು ಸರ್ಕಾರ ವಿಫಲವಾಗಿದೆ. ಪ್ರಸಿದ್ಧ ನ್ಯಾಯವಾದಿ ಪಾಲ್ಕಿವಾಲ್ ಅವರ ಒಂದು ಸಮೀಕ್ಷೆಯಂತೆ ಪ್ರತಿದಿನವೂ ನಮ್ಮ ದೇಶದಲ್ಲಿ ರೂ. 36 ಕೋಟಿಯಷ್ಟು ಕಪ್ಪು ಹಣ ಸೃಷ್ಟಿಯಾಗುತ್ತಿದೆ. ವರ್ಷಕ್ಕೆ ರೂ. 13,000 ಕೋಟಿ ಕಪ್ಪು ಹಣ ! ಆಸ್ತಿವಂತರ ಸಂಪತ್ತಿನ ಬೆಲೆ ಹೆಚ್ಚುತ್ತಿದೆ. ತೆರಿಗೆ ತಪ್ಪಿಸುವುದು, ಅಕ್ರಮ ಸಂಗ್ರಹ, ಕಳ್ಳ ಸಾಗಣಿಕೆ, ಅನವರತ ನಡೆಯುತ್ತಿದೆ, ಆದರೆ, ಸರ್ಕಾರ ಈ ಮೂಲಗಳನ್ನು ಮುಟ್ಟದೆ ತನ್ನ ಖರ್ಚು ವೆಚ್ಚಗಳಿಗೆ ಅಪ್ರತ್ಯಕ್ಷ ತೆರಿಗೆಗಳನ್ನೂ, ಅಗತ್ಯ ಸೇವಾ ಸೌಲಭ್ಯಗಳ ಮತ್ತು ಸಾಮಗ್ರಿಗಳ ಬೆಲೆ ಏರಿಸುವುದನ್ನೂ ಅವಲಂಬಿಸಿ ಬಡಜನರನ್ನು ಶೋಷಿಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಟ್ಟು ತೆರಿಗೆ ಸಂಗ್ರಹ 1981-82 ರಲ್ಲಿ ರೂ. 2,191 ಕೋಟಿಯಷ್ಟಾಗಿತ್ತು. ಅಂದರೆ ಪ್ರತಿ ಒಬ್ಬ ಪ್ರಜೆಯೂ ಸರಾಸರಿ ವರ್ಷಕ್ಕೆ ರೂ. 326, ದಿನಕ್ಕೆ ಒಂದು ರೂಪಾಯಿ ತೆರಿಗೆ ಕೊಡಬೇಕಾಯಿತು, 700 ಮಿಲಿಯ ಜನಸಂಖ್ಯೆಯಲ್ಲಿ 40 ರಷ್ಟು, ಅಂದರೆ 300 ಮಿಲಿಯ ಜನರು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವವರೂ ತಾವು ದಿನನಿತ್ಯವೂ ತಿನ್ನುವ ಉಪ್ಪು, ಆಹಾರ ಸಾಮಗ್ರಿಗಳು, ಕುಡಿಯುವ ಕಾಫಿ ಟೀ ಪಾನೀಯಗಳು, ಪ್ರಯಾಣಿಸುವ ಬಸ್ಸು, ರೈಲ್ವೆ, ನೋಡುವ ಸಿನೀಮಾ, ಉರಿಸುವ ಬೆಂಕಿ ಪೆಟ್ಟಿಗೆ, ಸೀಮೆಎಣ್ಣೆ, ಕಟ್ಟಿಗೆ, ಇದ್ದಲು, ಬಳಸುವ ಮೇಣವು, ಒಟ್ಟೆ, ಇತ್ಯಾದಿಗಳ ಮೇಲೆ ಭಾರೀ ಪ್ರಮಾಣದಲ್ಲಿ ಅಪ್ರತ್ಯಕ್ಷ ತೆರಿಗೆ ಕೊಡಬೇಕಾಗುವುದು. ದಿನಕ್ಕೆ ಒಂದು-ಎರಡು ರೂಪಾಯಿ ಸಂಪಾದನೆಯೂ ಇಲ್ಲದ ಅಸಂಖ್ಯಾತ ನಿರುದ್ಯೋಗಿಗಳೂ, ಅರೆ ಉದ್ಯೋಗಿಗಳೂ, ಬಡವರೂ, ದರಿದ್ರರೂ ಈ ಕರಭಾರವನ್ನು ಹೇಗೆ ಸಹಿಸಬೇಕು ?

198 -83 ರ ಕೇಂದ್ರ ಮುಂಗಡ ಪತ್ರದಲ್ಲಿ ಹಾಗೂ ಅದರ ಪೂರ್ವಭಾವಿಯಾಗಿ ವಿಧಿಸಿದ ಒಟ್ಟು ರೂ 1,300 ಕೋಟಿ ಹೊಸ ತೆರಿಗೆಗಳಿಂದ ಮತ್ತು ರೂ. 1, 65 ಕೋಟಿ ಕೊರತೆಯಿಂದಾಗಿ ಜನಸಾಮಾನ್ಯರ ಮೇಲೆ ಇನ್ನಷ್ಟು ಕರಭಾರ ಹೇರಿದಂತಾಯಿತು. ಪೆಟ್ರೋಲಿಯಂ ಪದಾರ್ಥಗಳ ದರಗಳನ್ನು ಈಗಾಗಲೇ ಹಲವು ಬಾರಿ ಏರಿಸಲಾಗಿದೆ ಮೀಟರಿಗೆ ರೂ. 20 ಕ್ಕಿಂತ ಹೆಚ್ಚು ಬೆಲೆ ಬಾಳುವ ಬಟ್ಟೆಯ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗಿದೆ. ಸಿಮೆಂಟ್ ಚೀಲ ಒಂದಕ್ಕೆ ರೂ. 3 ಹೆಚ್ಚಿಸಲಾಗಿದೆ. ವಿದ್ಯುತ್, ಕಲ್ಲಿದ್ದಲು, ಇತ್ಯಾದಿ ಅವಶ್ಯಕ ವಸ್ತುಗಳ ಬೆಲೆಗಳೂ ಸಧ್ಯದಲ್ಲಿಯೇ ಏರಬಹುದು. ಸಮೀಪ-ದೂರದ ರೈಲು ಪ್ರಯಾಣದ ದರಗಳೂ ಹೆಚ್ಚಾದವು. ಪೋಸ್ಟರ್ ಕವರುಗಳ ಮತ್ತು ತಂತಿ ಮನಿಯಾರ್ಡರುಗಳ ದರಗಳೂ ಏರಿದವು. ಜೀವನಾವಶ್ಯಕ ವಸ್ತುಗಳಾದ ಆಹಾರ ಧಾನ್ಯಗಳು, ಹಣ್ಣು, ತರಕಾರಿ ರಾಸಾಯನಿಕ ಗೊಬ್ಬರ, ಕಬ್ಬು, ಸಕ್ಕರೆ, ಕಲ್ಲಿದ್ದಲು, ಅಡಿಗೆ ತೈಲ, ಉಪ್ಪು ಮುಂತಾದವುಗಳನ್ನು ಇನ್ನು ಮುಂದೆ ರೈಲುಗಳಲ್ಲಿ ಸಾಗಿಸಲು ಹೆಚ್ಚು ದರಗಳನ್ನು ತೆರಬೇಕಾಗುವುದು. ಅಂದರೆ, ಇವುಗಳ ಅಂತಿಮ ಬೆಲೆ ಗ್ರಾಹಕರಿಗೆ ಹೆಚ್ಚಾಗುವುದು. ಸರ್ಕಾರ ಈ ಅವಶ್ಯಕ ವಸ್ತುಗಳು ಜನಸಾಮಾನ್ಯರಿಗೆ ಸುಲಭ ಬೆಲೆಗೆ ಸಿಗಲು ಧನ ಸಹಾಯ ನೀಡುವ ನಿರೀಕ್ಷೆ ಇಲ್ಲ. ಕಾರಣ, 1982 83 ರ ಮುಂಗಡ ಪತ್ರದಲ್ಲಿ ಸಹಾಯ ಧನದ ಮೊತ್ತವು 1981 82 ರಲ್ಲಿನ ರೂ. 700 ಕೋಟಿಯಷ್ಟೆ ಆಗಿರುವುದು. ವ್ಯವಸಾಯದ ವೆಚ್ಚವು ಹೆಚ್ಚಿರುವುದರಿಂದ ಅದಕ್ಕನುಗುಣವಾಗಿ ಕೃಷಿ ಉತ್ಪನ್ನಗಳ ಬೆಲೆಗಳನ್ನೂ ಲಾಭದಾಯಕವಾಗುವಂತೆ ಏರಿಸುವ ನಿರೀಕ್ಷೆಯೂ ಇಲ್ಲ ಒಟ್ಟಿನಲ್ಲಿ ಈ ಮುಂಗಡ ಪತ್ರದ ತೆರಿಗೆಗಳಿಂದಾಗಿ ಬಡಜನರೂ, ಮಧ್ಯಮ ವರ್ಗದವರೂ, ವ್ಯವಸಾಯಗಾರರೂ ಮತ್ತಷ್ಟೂ ಕಷ್ಟನಷ್ಟಗಳಿಗೊಳಗಾಗಲಿರುವರು.

ಇಂದಿರಾ ಸರ್ಕಾರದ ಬಂಡವಾಳಶಾಹಿ ಆರ್ಥಿಕ ಧೋರಣೆಯಂತೆ, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ನಿರ್ದೇಶನದಂತೆ, ಬಡಜನರಲ್ಲಿ ಹಣ ಸಂಗ್ರಹ ಆಗಬಾರದು. ಅವರ ಗಳಿಕೆಯು ಸರ್ಕಾರದ ತೆರಿಗೆ ರೂಪದಲ್ಲಿ ಯಃ ಭೂಮಾಲಿಕರ-ಬಂಡವಾಳಶಾಹಿಗಳ ಲಾಭದ ರೂಪದಲ್ಲಿಯೂ ಹರಿದು ಹೋಗಬೇಕು. ಅವರಲ್ಲಿ ಹಣ ಉಳಿದರೆ ತಿಂದು ಹಾಳು ಮಾಡುತ್ತಾರೆ! ಶ್ರೀಮಂತರಲ್ಲಿ ಹಣ ಸಂಗ್ರಹ ಆಗಬೇಕು ! ಆ ಹಣವನ್ನು ಅವರು ಉಳಿಸುವಂತೆ, ಅವರಿಗೆ ಬೇಕು ಬೇಕಾದ ಪ್ರೋತ್ಸಾಹ, ಸವಲತ್ತುಗಳನ್ನು ಒದಗಿಸಲಾಗುವುದು. ತೆರಿಗೆ ರಿಯಾಯಿತಿ ಕೊಡಲಾಗುವುದು. (1982-83) ರ ಮುಂಗಡ ಪತ್ರದಲ್ಲಿ ಪಂಚತಾರಾ ಹೋಟೆಲುಗಳ ಆದಾಯಗಳ ಮೇಲೆ ತೆರಿಗೆ ರಿಯಾಯಿತಿ ಚಾ, ಕಾಫಿ, ರಬ್ಬರ್, ತೋಟಗಾರಿಕೆಯ ಮೇಲೆ ಸಂಪತ್ತು ತೆರಿಗೆಯ ರದ್ಧತಿ, ವಿದೇಶದಲ್ಲಿರುವ ಭಾರತೀಯರು ಸ್ವದೇಶಕ್ಕೆ ಹಣ ರವಾನಿಸಲು ವಿಶೇಷ ಪ್ರೋತ್ಸಾಹ, ಆಸ್ತಿ, ಸಂಪತ್ತು, ಆದಾಯ ತೆರಿಗೆಗಳಲ್ಲಿ ಮೇಲ್ವರ್ಗದವರಿಗೆ ಕೆಲವು ರಿಯಾಯಿತಿಗಳು ಶ್ರೀಮಂತ ವರ್ಗದವರು ಬಳಸುವ ಹೆಲ್ಮೆಟ್. ವಾಟರ್ ಹೀಟರ್ ಮತ್ತು ಕೂಲರ್. ಫಿಲ್ಟರ್, ಥರ್ಮಾಸ್ ಫ್ಲಾಸ್ಕ್, ಗ್ಲಾಸು ಪಾತ್ರೆಗಳು, ಅಲಾರಂ ಗಡಿಯಾರ ಇತ್ಯಾದಿ ವಸ್ತುಗಳ ಮೇಲೆ ತೆರಿಗೆ ರಿಯಾಯಿತಿ, ಕೈಗಾರಿಕೆಗಳಿಗೆ, ರಫ್ತು ವ್ಯಾಪಾರಕ್ಕೆ ತೆರಿಗೆ ರಿಯಾಯಿತಿ, ಇತ್ಯಾದಿಗಳನ್ನು ಗಮನಿಸಬೇಕು,

ಅನುತ್ಪಾದಿತ ವಿಷಯುಗಳಿಗೆ ಅಧಿಕ ವೆಚ್ಚ :

ಭಾರೀ ಪ್ರಮಾಣದಲ್ಲಿ ಅಪ್ರತ್ಯಕ್ಷ ತೆರಿಗೆಗಳನ್ನು ಹೇರಿ, ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನೇರಿಸಿ, ಜನಸಾಮಾನ್ಯರನ್ನು ಶೋಷಿಸಿ ಸಂಗ್ರಹಿಸಿದ ಅಪಾರ ಸಂಪನ್ಮೂಲಗಳು ಹೇಗೆ ವಿನಿಯೋಗವಾಗುತ್ತಿವೆ ? ಜನರ ಜೀವನ ಮಟ್ಟ ಕುಸಿಯುತ್ತಿದೆ ನಿರುದ್ಯೋಗ, ಬಡತನ, ಅಸಮಾನತೆ, ಅನಾರೋಗ್ಯ, ಅನಕ್ಷರತೆ ಹೆಚ್ಚುತ್ತದೆ. ಜೀವನಾವಶ್ಯಕ ವಸ್ತುಗಳ ವಿತರಣೆಯು ಸ್ಥಗಿತಗೊಂಡಿದೆ ಅಥವಾ ಕಡಿಮೆಯಾಗುತ್ತಿದೆ. ಬೆಲೆ ಏರಿಕೆ, ಹಣ ದುಬ್ಬರ ಹೆಚ್ಚುತ್ತಿದೆ. ಜನಸಾಮಾನ್ಯರ ಗ್ರಾಹಕ ಶಕ್ತಿಯು ಕುಸಿಯುತ್ತಿದೆ. ಕಳೆದ ವರ್ಷ 6 ಲಕ್ಷ ಜನರಿಗೆ ಉದ್ಯೋಗ ದೊರಕಿದರೆ, ಹದಿನೈದು ಲಕ್ಷ ಹೊಸ ನಿರುದ್ಯೋಗಿಗಳು ಸಾಲು ನಿಂತಿದ್ದಾರೆ. ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ದಾಖಲಾದವರ ಸಂಖ್ಯೆಯೂ 1 50 ಕೋಟಿಯಷ್ಟಾಗಿದೆ. ಸರ್ಕಾರ ಸಂಗ್ರಹಿಸಿದ ಸಂಪನ್ಮೂಲದ ಸಿಂಹಪಾಲು ರಕ್ಷಣೆ ಮತ್ತು ಆಡಳಿತ ವೆಚ್ಚಕ್ಕೆ ವಿನಿಯೋಗವಾಗುತ್ತಿದೆ. 1982-83 ರ ಮುಂಗಡ ಪತ್ರದಲ್ಲಿ ರೂ. 5,100 ಕೋಟಿ— ಶೇ. ಹದಿನೇಳರಷ್ಟು ರಕ್ಷಣಾ ಖಾತೆಗೇ ಮೀಸಲಾಗಿದೆ ಇದು ಕಳೆದ ವರ್ಷಕ್ಕಿಂತ ರೂ. 900 ಕೋಟಿಯಷ್ಟು ಹೆಚ್ಚಾಗಿದೆ. ಕೇಂದ್ರ ಪೋಲೀಸು ಖಾತೆಗೆ ರೂ. 331 ಕೋಟಿ ಮೀಸಲಾಗಿದೆ. ಕಳೆದ ವರ್ಷಕ್ಕಿಂತ ರೂ. ನಲವತ್ತು ಕೋಟಿ ಹೆಚ್ಚು. ವಿದೇಶಿ ಸಾಲ ಮತ್ತು ಅದರ ಮೇಲಿನ ಬಡ್ಡಿ ತೀರಿಸಲು ರೂ. 900 ಕೋಟಿಯಷ್ಟು ಮೀಸಲಾಗಿಟ್ಟಿದೆ. 1984-85 ರಲ್ಲಿ ಇದಕ್ಕಾಗಿ ರೂ. ಎರಡು ಸಾವಿರ ಕೋಟಿ ಮೀಸಲಾಗಿಡಬೇಕಾದೀತು. ಕಾರಣ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಪಡೆದ ಸಾಲದ ಮೇಲೆ ಬಡ್ಡಿ

(7 ನೆಯ ಪುಟ ನೋಡಿ)

ಮುಂಬೈಯ 2.5 ಲಕ್ಷ ಗಿರಣಿ ಕಾರ್ಮಿಕರ ಅಭೂತಪೂರ್ವ ಮುಷ್ಕರ

ಸುಧೀಂದ್ರ ಕುಲಕರ್ಣಿ

ಜನವರಿ 18ರಿಂದ ಮುಂಬೈಯ 2.5 ಲಕ್ಷ ಗಿರಣಿ ಕಾರ್ಮಿಕರ ಅಭೂತಪೂರ್ವ ಮುಷ್ಕರ ಶುರುವಾಗಿದೆ. ಎಲ್ಲ ಗಿರಣಿಗಳೂ ಬಂದಾಗಿವೆ. ಇದಕ್ಕೂ ಮೊದಲು 8 ಗಿರಣಿಗಳಲ್ಲಿಯ 35 ಸಾವಿರ ಕಾರ್ಮಿಕರು 1981 ಅಕ್ಟೋಬರ ಎರಡರಿಂದಲೇ ಸಂಪಿನ ಮೇಲಿದ್ದಾರೆ. ಮುಂಬೈ ಅಷ್ಟೇ ಅಲ್ಲ ಇಡೀ ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿಯೇ ತುಂಬ ಮಹತ್ವದ ಹಾಗೂ ಗೌರವಾಸ್ಪದ ಸ್ಥಾನ ಪಡೆದಿದ್ದ ಈ ಗಿರಣಿ ಕಾರ್ಮಿಕರು ಕಳೆದ ಮೂವತ್ತೈದು ವರ್ಷಗಳಲ್ಲಿ ಮಾಲಿಕ-ಸರಕಾರ ಇಂಟಕ್ ನೇತಾಗಣದ ದುಷ್ಟ ಕೂಟದಿಂದ ಅನುಭವಿಸಿದ ಅಪಾರ ಶೋಷಣೆ, ಅನ್ಯಾಯ, ಮೋಸಗಳ ವಿರುದ್ಧ ಇಂದು ಪುನಃ ತಮ್ಮ ಐಕ್ಯತೆಯ ಹೋರಾಟದ ಕತ್ತಿಯನ್ನೆತ್ತಿ ನಿಂತಿದ್ದಾರೆ. ಅವರ ಹೋರಾಟದ ಇತಿಹಾಸದ ಹಾಗೂ ಅದರ ಪ್ರಸಕ್ತ ಸ್ವರೂಪದ ಸಂಕ್ಷಿಪ್ತ ವರದಿ ಇಲ್ಲಿದೆ:

ಹೋರಾಟದ ಪರಂಪರೆ

1874 ರಿಂದ ಬ್ರಿಟೀಷರು ಪ್ರಾರಂಭಿಸಿದ ಔದ್ಯೋಗೀಕರಣದ ಚೊಚ್ಚಲು ಮಗುವಾದ ಮುಂಬೈಯ ಗಿರಣಿ ಕಾರ್ಮಿಕ ಸಮುದಾಯವು ಅನೇಕ ಆರ್ಥಿಕ-ರಾಜಕೀಯ ಹೋರಾಟಗಳ ಮಹಾನ್ ದಾಖಲೆ ಹೊಂದಿದೆ. ಈ ದೇಶದ ಟ್ರೇಡ್ ಯೂನಿಯನ್ ಚಳುವಳಿಯ ದೀಪ ಹೊತ್ತಿಸಿದವರೇ ಈ ಕಾರ್ಮಿಕರು. 1940ರಲ್ಲಿ 40 ದಿನಗಳ ಸಂಪು ನಡೆಸಿ ಮುಂಬೈಯ ಎರಡು ಲಕ್ಷ ಗಿರಣಿ ಕಾರ್ಮಿಕರು ಸರ್ವಪ್ರಥಮವಾಗಿ ತುಟ್ಟಿಭತ್ತೆಯನ್ನು ಪಡೆದರು. ಹಾಗೂ ಬೆಲೆಯೇರಿದಂತೆ ಸೂಚ್ಯಾಂಕದನುಸಾರವಾಗಿ ತುಟ್ಟಿಭತ್ತೆ ದೊರಕಿಸುವ ತತ್ವವನ್ನು ಜಾರಿಗೆ ತರಿಸಿದರು. ನಂತರ ದೇಶದ ಇತರ ಉದ್ಯೋಗಗಳಲ್ಲೂ ಈ ತತ್ವವನ್ನನುಸರಿಸಲಾಯಿತು. ತುಟ್ಟಿ ಭತ್ತೆಯಂತೆಯೇ ಕಾನೂನು ರೀತ್ಯಾ ಬೋನಸ್ ಪದ್ಧತಿಯೂ ಇವರಿಂದಲೇ ಶುರುವಾಯಿತು. ಭಾರತದ ಕಮ್ಯೂನಿಸ್ಟರ ಕಾರ್ಮಿಕ ವರ್ಗದಲ್ಲಿಯ ಕಾರ್ಯ ಗಿರಣಿ ಕಾರ್ಮಿಕರಿಂದಲೇ ಶುರುವಾಗಿ 1950 ರ ವರೆಗೂ ಕೂಡ ಐಟಕ್ ನೇತೃತ್ವದಲ್ಲಿಯ ಕೆಂಪು ಧ್ವಜದ ಭದ್ರಕೋಟೆ ಎಂದು ಹೆಸರು ಗಳಿಸಿತ್ತು. ಸ್ವಾತಂತ್ರ್ಯ ಸಮರದಲ್ಲಿ ಮುಂಬೈ ಗಿರಣಿ ಕಾರ್ಮಿಕರ ಹೋರಾಟಗಳು ಕಣ್ಣು ತೆರೆಯಿಸುವಂಥವು. 1908ರಲ್ಲಿ ಲೋಕಮಾನ್ಯ ತಿಲಕರನ್ನು ಬ್ರಿಟೀಶರು ಬಂಧಿಸಿದಾಗ ಮುಂಬೈಯ ಗಿರಣಿ ಕಾರ್ಮಿಕರು ತಿಲಕರ ಬಿಡುಗಡೆಗಾಗಿ ಆರು ದಿನಗಳ ವರೆಗೆ ಸತತ ಗಿರಣಿಗಳನ್ನು ಬಂದು ಮಾಡಿ ದೇಶದಲ್ಲಿಯ ಪ್ರಥಮ ರಾಜಕೀಯ ಮುಷ್ಕರ ನಡೆಸಿದರು. ಈ ಸಂಪಿನಲ್ಲಿ ಬ್ರಿಟೀಷ್ ಸರಕಾರದ ಗುಂಡಿಗೆ ಹದಿನಾಲ್ಕು ಕಾರ್ಮಿಕರು ಹುತಾತ್ಮರಾದರು. 1920 ರಲ್ಲಿ ಇಂಗ್ಲೆಂಡಿನ ಯುವರಾಜನು ಭಾರತಕ್ಕೆ ಭೇಟಿಯಿತ್ತಾಗ ಎಲ್ಲ ಬೀದಿ ದೀಪಗಳನ್ನು ಒಡೆದು ಮುಂಬೈಯನ್ನು ಗಾಢ ಕತ್ತಲೆಯಲ್ಲಿ ಮುಳುಗಿಸಿ ರಾತ್ರಿಯಲ್ಲಿ ಪ್ರತಿಬಂಧ ಕಾಜ್ಞೆ ಮುರಿದು ಪಂಜಿನ ಮೆರವಣಿಗೆ ತೆಗೆದವರು ಅವರೇ. 1927 ರಲ್ಲಿ 'ಸಾಯಮನ್ ಕಮಿಶನ್ ಚಲೇಜಾವ್' ಎಂದು ಮುಂಬೈಯ ಬೀದಿಗಳಲ್ಲಿ ಕಪ್ಪು ಧ್ವಜದ ಬಹಿಷ್ಕಾರ ಸಾಗರವನ್ನವರು ನಿರ್ಮಿಸಿದರು. 1939 ಅಕ್ಟೋಬರ ಎರಡರಂದು ಕೈಯಲ್ಲಿ ಕೆಂಪುಬಾವುಟ ಹಿಡಿದು ಸಾಮ್ರಾಜ್ಯಶಾಹಿ ಯುದ್ಧ ವಿರೋಧಿ ಸಂಪು ನಡೆಸಿದ ಮೊದಲಿಗರಲ್ಲಿ ಇವರು ಸೇರಿ ಜಾಗತಿಕ ಕಾರ್ಮಿಕ ಚಳುವಳಿಯ ಪ್ರಶಂಸೆ ಗಳಿಸಿದರು. 1946 ಫೆಬ್ರವರಿ 22 ರಂದು ಮುಂಬೈಯ ನಾವಿಕರ ಸಶಸ್ತ್ರ ಬಂಡಾಯಕ್ಕೆ ಬೆಂಬಲ ನೀಡಿ, ನೂರಾರು ಕಾರ್ಮಿಕರು ರಕ್ತ ಚೆಲ್ಲಿ ಮುಷ್ಕರ ನಡೆಸಿದರು. ಇವರು ಬ್ರಿಟಿಶ್ ಸಾಮ್ರಾಜ್ಯಕ್ಕೆ ಭಾರತೀಯ ಜನತೆ ಕೊಟ್ಟ ಕೊನೆಯ ಏಟಿನಲ್ಲಿ ಕೈಕೂಡಿಸಿದರು.

ಎರಡನೆ ಮಹಾಯುದ್ಧ ಕಾಲದಲ್ಲಿ ಜಾಗತಿಕ ಮಾರುಕಟ್ಟೆಯ ಲಾಭ ಪಡೆದು ಬಟ್ಟೆ ಗಿರಣಿ ಮಾಲಿಕರು ಕಾರ್ಮಿಕರನ್ನು ನಿರ್ದಯವಾಗಿ ದುಡಿಸಿ ಅಪರಿಮಿತ ಲಾಭ ಗಳಿಸಿದರು. ಆ ಕಾಲದಲ್ಲಿ ಈ ಉದ್ಯೋಗದಲ್ಲಿ ಲಾಭ ಪ್ರಮಾಣ ಆರುನೂರು ಪ್ರತಿಶತ ತಲುಪಿತ್ತು. ಕಾರ್ಮಿಕರು ತಮ್ಮ 'ಎಲುಬ (ಮೂಳೇ)ನ್ನುಕಡ್ಡಿ ಯಾಗಿಸಿ, ರಕ್ತವನ್ನು ನೀರಾಗಿಸಿ' ದುಡಿಯುತ್ತಿದ್ದ ಆ ಯುದ್ಧ ಕಾಲದಲ್ಲಿ ಗಿರಣಿಗಳಿಂದ 'ಕಲ್ಲಿದ್ದಲಿನ ಹೊಗೆ ಹೊರಬೀಳದೆ ಚಿನ್ನದ ಹೊಗೆ ಹೊರಬೀಳುತ್ತಿತ್ತು' ಎಂದು ಹೇಳಲಾಗುತ್ತದೆ. ಇಂದಿನ ಕೊಬ್ಬಿದ ಗುತ್ತೇದಾರಿ ಬಂಡವಾಳುದಾರರಾದ ಬಿರ್ಲಾ, ಟಾಟಾ, ಮಫತಲಾಲ್, ಖಟಾವ್ ಮುಂತಾದವರ ಬಂಡವಲಿನಲ್ಲಿ ಯುದ್ಧ ಕಾಲದಲ್ಲಿ ಹೀರಿದ ಲಾಭದ ಸ್ಥಾನ ಮಹತ್ವದ್ದಾಗಿದೆ. ಅಂತೆಯೇ ಸ್ವಾತಂತ್ರ್ಯನಂತರ ಕೆಂಬಾವುಟದ ಕೆಳಗೆ ಒಕ್ಕಟ್ಟಾದ ಕಾರ್ಮಿಕರು ತಮ್ಮ ಬೇಡಿಕೆಗಳನ್ನಿಡತೊಡಗಿದಾಗ ಕಾಂಗ್ರೆಸ್ ಸರಕಾರವು ಹೊಸ ತಂತ್ರವನ್ನನುಸರಿಸಿತು. 1949 ರಲ್ಲಿ ಬಾಂಬೆ ಇಂಡಸ್ಟ್ರಿಯಲ್ ರಿಲೇಶನ್ಸ್ ಆಕ್ಟ್ (ಬಿ.ಐ ಆರ್.) ಎಂಬ ಕಾನೂನನ್ನು ಜಾರಿಗೊಳಿಸಿ ಸಂಪೂರ್ಣ ಗಿರಣಿ ಉದ್ಯೋಗದಲ್ಲಿ ಒಂದೇ ಒಂದು ಪ್ರಾತಿನಿಧಿಕ ಯೂನಿಯನ್ ಇರುವುದೆಂದು ಸಾರಿತು. ಹಾಗೂ ಎಲ್ಲ ಕಾರ್ಮಿಕರೂ "ಗಿರಣಿ ಕಾಮಗಾರ ಯೂನಿಯನ್ GKU (ಐಟಕ್) ಸಮರ್ಥಿಸುತ್ತಿರುವಾಗ ಹೊಸದಾಗಿ ಕಟ್ಟಿದ ರಾಷ್ಟ್ರೀಯ ಮಿಲ್ ಮಜದೂರ ಸಂಘ (ಇಂಟಕ್) ವನ್ನು ಪ್ರಾತಿನಿಧಿಕ ಯೂನಿಯನ್ನೆಂದು ಘೋಷಿಸಿತು. ಆ ಕಾಲದಲ್ಲಿ ಮುಂಬೈ ಟ್ರೇಡ್ ಯೂನಿಯನ್ ಚಳುವಳಿಯ ಹೆಸರಾಂತ ನಾಯಕ ಡಾಂಗೆಯವರು ಈ ಕಾಯಿದೆಯನ್ನು ಕಟ್ಟುನಿಟ್ಟಾಗಿ ವಿರೋಧಿಸಿ ಅಸೆಂಬ್ಲಿಯಲ್ಲಿ ಸತತ 11 ತಾಸು ವಾದಿಸಿದರು. ಅದೇ ಡಾಂಗೆ ನಂತರ ತಮ್ಮ ತತ್ವಘಾತಕ ರಾಜಕಾರಣದಿಂದಾಗಿ ಗಿರಣಿ ಕಾರ್ಮಿಕರನ್ನು ಪ್ರತಿಗಾಮಿ ಶಕ್ತಿಗಳತ್ತ ಹೊರಳುವಂತೆ ಮಾಡಿದ್ದು ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿಯ ಒಂದು ವಿಪರ್ಯಾಸವು. ಈ ಕಾಯ್ದೆಗೆ ಪ್ರಖರ ವಿರೋಧ ಶುರುವಾದಾಗ ಕಾಂಗ್ರೆಸ್ ಸರಕಾರ ನಿರ್ದಯವಾದ ಪೋಲಿಸ್ ಕ್ರಮ ಪ್ರಾರಂಭಿಸಿತು. ಐಟಕ್ ಸರ್ವ ನಾಯಕ ಮಂಡಳಿ ಎರಡೂವರೆ ವರ್ಷಗಳ ಕಾಲ ಜೈಲುವಾಸ ಇಲ್ಲವೇ ಭೂಗತ ವಾಸ ಉಂಡರು.

ಅಂದಿನಿಂದ ಇಂದಿನ ವರೆಗೆ ಮಾಲಿಕ ಸಂಘ ಹಾಗೂ ಪ್ರಾತಿನಿಧಿಕ ಇಂಟಕ್ ಸಂಘಗಳ ಕೂಟ ಕಾರ್ಮಿಕರನ್ನು ಅವ್ಯಾಹತವಾಗಿ ಶೋಷಣೆ, ಮೋಸ, ಭ್ರಷ್ಟಾಚಾರಗಳ ದವಡೆಯಲ್ಲಿ ಹಿಡಿದಿದೆ. ಈ ಅವಧಿಯಲ್ಲಿ ಇಂಟಕ್ ಕಾರ್ಮಿಕರ ಯಾವುದೇ ಬೇಡಿಕೆಯನ್ನೂ ಎತ್ತಿ ಹೋರಾಡಿಲ್ಲ. ಕಾರ್ಮಿಕರೇ ಇತರ ಸಂಘಟನೆಗಳಡಿಯಲ್ಲಿ ಚಿಕ್ಕ-ದೊಡ್ಡ ಮುಷ್ಕರಗಳನ್ನು ನಡೆಸಿ ಕೆಲವು ಬೇಡಿಕೆಗಳನ್ನು ದೊರಕಿಸಿಕೊಂಡರೂ ಒಪ್ಪಂದ ಮಾತ್ರ ಇಂಟಕ್ ಯೂನಿಯನ್ನಿನೊಂದಿಗೇನೇ. ಇಂದು ಗಿರಣಿ ಕಾರ್ಮಿಕರ ಆರ್ಥಿಕ ಸ್ಥಿತಿ ಇತರೆಲ್ಲ ಸಂಘಟಿತ ಉದ್ಯೋಗಗಳಲ್ಲಿಯ ಕಾರ್ಮಿಕರಿಗಿಂತ ತುಂಬ ಶೋಚನೀಯವಾಗಿದೆ. ಇದರರ್ಥ ಗಿರಣಿ ಉದ್ಯೋಗದಲ್ಲಿ ಲಾಭ ಕಡಿಮೆ ಎಂತಲ್ಲ. ಬಾಂಬೆ ಡೈಯಿಂಗ್, ಸೆಂಚ್ಯುರಿ, ಪೋದಾರ ಇತ್ಯಾದಿ ಎಲ್ಲ ಚಿಕ್ಕ ದೊಡ್ಡ ಕಂಪನಿಗಳೂ ಕೋಟ್ಯಾವಧಿ ಲಾಭ ಗಳಿಸುತ್ತಿವೆ. ಈ ಮಾಲಿಕರು ವೇಗದಿಂದ ಆಧುನೀಕರಣ ಕೈಕೊಳ್ಳುತ್ತಿದ್ದಾರೆ. ಇತರ ಹೊಸ ಉದ್ಯೋಗಗಳಿಗೆ ಲಾಭವನ್ನು ವರ್ಗಾಯಿಸುತ್ತಿದ್ದಾರೆ. ಕೆಲವು ಮಾಲಿಕರಂತೂ ತಮ್ಮ ಗಿರಣಿಗಳನ್ನು ಸಂಪೂರ್ಣವಾಗಿ ಹಿಂಡಿ ಹೀರಿ, ಬಂಡವಲನ್ನೆಲ್ಲ ಹೊರಗೆ ಸಾಗಿಸುತ್ತಾರೆ. ಸರಕಾರ ಇಂಥ ಕ್ಷೀಣಿಸಿದ್ದ ಗಿರಣಿಗಳಲ್ಲಿ ತನ್ನ ಹಣ ಹೂಡಿಸಿ ನ್ಯಾಶನಲ್ ಟೆಕ್ಸ್‌ಟಾಯಿಲ್ ಕಾರ್ಪೊರೇಷನ್ (ಎನ್.ಟಿ.ಸಿ.) ಅಡಿಯಲ್ಲಿ ಪೋಷಿಸುತ್ತಿದೆ. ಇಂದು ದೇಶದಲ್ಲಿ 111 ಗಿರಣಿಗಳನ್ನು ಎನ್. ಟಿ. ಸಿ. ಮೂಲಕ ನಡೆಸುತ್ತಿರುವ ಸರಕಾರ 20 ಪ್ರತಿಶತ (2ಲಕ್ಷ) ಕಾರ್ಮಿಕರಿಗೆ ಮಾಲಿಕನಾಗಿದೆ. ಖಾಸಗಿ ಹಾಗೂ ಸರಕಾರಿ ಗಿರಣಿಗಳೆರಡರಲ್ಲೂ ಭರದಿಂದ ಸಾಗಿರುವ ನೂತನೀಕರಣದಿಂದಾಗಿ ನಿರುದ್ಯೋಗದ ಸಮಸ್ಯೆ ತೀವ್ರಗೊಳ್ಳುತ್ತಿದೆ. 1948ರಲ್ಲಿ ಮುಂಬೈ ಗಿರಣಿ ಕಾರ್ಮಿಕರ ಸಂಖ್ಯೆ 2.5 ಲಕ್ಷ ಇತ್ತು, ಇಂದೂ ಅಷ್ಟೇ ಇದೆ. ಅಂದು ಸ್ತ್ರೀ ಕಾರ್ಮಿಕರ ಸಂಖ್ಯೆ 40 ಸಾವಿರ ಆಗಿತ್ತು, ಇಂದು ಕೇವಲ ನಾಲ್ಕು ಸಾವಿರವಾಗಿದೆ.

ಸದ್ಯದ ಮುಷ್ಕರದಲ್ಲಿ ಮುಖ್ಯವಾಗಿ ಮೂರು ಬೇಡಿಕೆಗಳಿವೆ. 1) ಎಲ್ಲ ಭತ್ತೆಗಳನ್ನೂ ಸೇರಿ ಕನಿಷ್ಠ ಹಾಗೂ ತಾತ್ಕಾಲಿಕ ವೇತನ ವೃದ್ಧಿಯಿಂದಾಗಿ ರೂ. 300 ಹೆಚ್ಚಿಸಬೇಕು. 2) ಬಿ. ಐ. ಆರ್. ಕಾಯ್ದೆ ರದ್ದಾಗಿ, ಗುಪ್ತ ಮತದಾನದಿಂದ ಪ್ರಾತಿನಿಧಿಕ ಸಂಘದ ಆಯ್ಕೆಯಾಗಬೇಕು. 3) 60 ಸಾವಿರ ಬದಲಿ ಕಾರ್ಮಿಕರಿಗೆ ಖಾಯಂ ನೌಕರಿಯಾಗಬೇಕು. ಇಂಟಕ್ ವಿರುದ್ಧ ಕಾರ್ಮಿಕರ ಕ್ರೋಧ ಎಷ್ಟಿದೆಯೆಂದರೆ 'ನಮಗೆ ಈ ಮುಷ್ಕರದಿಂದ ಒಂದು ಪೈ ಹೆಚ್ಚು ಸಿಗದಿದ್ದರೂ ಅಡ್ಡಿಯಿಲ್ಲ, ಬಿ.ಐ.ಆರ್. ಆಕ್ಟ್ ಹಾಗೂ ಇಂಟಕ್‌ಗಳನ್ನು ಒದ್ದು ಉರುಳಿಸಿದರೂ ಸಾಕು' ಎಂಬ ಧ್ವನಿ ಅನೇಕ ಬಾರಿ ಕೇಳಿ ಬರುತ್ತದೆ. ಇಂದು ಸ್ಟೀಫನ್ ಮುಂತಾದ ಕೇಂದ್ರೀಯ ಮಂತ್ರಿಮಂಡಲದಲ್ಲಿಯ ಪ್ರಭೃತಿಗಳೂ ಕೂಡ 'ಒಂದು ಉದ್ಯೋಗದಲ್ಲಿ ಒಂದೇ ಯೂನಿಯನ್' ಎಂಬ ತತ್ವ ತಂದು ಹಿಂಬಾಗಿಲಿನಿಂದ ಎಲ್ಲ ಕಡೆಗೆ ಇಂಟಕ್‌ವನ್ನು ಕಾರ್ಮಿಕರ ಮೇಲೆ ಹೇರುವ ಹವಣಿಕೆಯಲ್ಲಿರುವಾಗ ಗಿರಣಿ ಕಾರ್ಮಿಕರ ಬೇಡಿಕೆಯ ಮಹತ್ವ ಹಾಗೂ ಸರ್ಕಾರದ್ದು ಅಚಲ ಭೂಮಿಕೆಯ ಅರ್ಥ ಸ್ಪಷ್ಟವಾಗುತ್ತದೆ.

ಇನ್ನು ದತ್ತಾಸಾಮಂತ ಅಲೆಯ ಕುರಿತು :

ಕಳೆದ ಕೆಲವು ತಿಂಗಳುಗಳಿಂದ ಮುಂಬೈ ಟ್ರೇಡ್ ಯೂನಿಯನ್ ಕ್ಷೇತ್ರದಲ್ಲಿ ದತ್ತಾಸಾಮಂಥರಂಥ ಅಪ್ಪಟ ಅರ್ಥವಾದಿ ಹಾಗೂ ಸಂಧಿಸಾಧು ಟ್ರೇಡ್ ಯೂನಿಯನ್ ಮುಖಂಡನ ಪ್ರಭಾವ-ಹೊಸ ಎತ್ತರಗಳನ್ನು ತಲುಪಿದೆ. ಪ್ರಾರಂಭದಿಂದಲೂ ಕಾಂಗ್ರೆಸ್ ಸೆರಗಿನಲ್ಲಿಯೇ ಇದ್ದ ಇವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಸಿಗದಿದ್ದಕ್ಕಾಗಿ ಮಾತ್ರ ಇಂಟಕದಿಂದ ಹೊರಬಂದು ಸ್ವತಂತ್ರ (ವ್ಯಕ್ತಿ ಕೇಂದ್ರಿತ) ಸಂಘಟನೆಯನ್ನು ಸ್ಥಾಪಿಸಿದರು. ಮೊದಲೇ ಅಸಂತೋಷದಿಂದ ಭುಸುಗುಡುತ್ತಿದ್ದ ಗಿರಣಿ ಕಾರ್ಮಿಕರು ದತ್ತಾಸಾಮಂತರನ್ನು ತಮ್ಮ ಮುಷ್ಕರದ ನೇತೃತ್ವ ವಹಿಸಲು ಆಮಂತ್ರಿಸಿದರು. ಆದರೆ ದತ್ತಾಸಾಮಂತರ ವ್ಯಕ್ತಿವಾದಿ, ಹಾಗೂ ಸಂಧಿಸಾಧು ರಾಜಕಾರಣವು ಸಾಮಂತರನ್ನು ದುರ್ಗತಿಗೆ ಸಾಗಿಸದೇ ಇರಲಾರದು. ಎಡ ಟ್ರೇಡ್ ಯೂನಿಯನ್ನುಗಳೊಂದಿಗೆ ಸಂಯುಕ್ತ ಕಾರ್ಯಾಚರಣೆಗೆ ಅವರು ಮುಂದೆ ಬಂದದ್ದು ತೀರ ಕಡಿಮೆ. ಜನವರಿ 19ರ ಸಾರ್ವತ್ರಿಕ ಮುಷ್ಕರದಲ್ಲಿ ಅವರು ಕೊನೆಕ್ಷಣ ಸೇರಿದ್ದಷ್ಟೇ ಅಲ್ಲ ತಮ್ಮ ನೇತೃತ್ವದಲ್ಲಿಯ ಸಾರಿಗೆ ಕಾರ್ಮಿಕರನ್ನು ಬಂದ್‌ನಿಂದ ದೂರವಿಟ್ಟರು. ಕೆಲವು ದಿನಗಳ ಹಿಂದೆ ಅವರು ಪತ್ರಿಕಾ ಹೇಳಿಕೆ ಕೊಟ್ಟದ್ದೇನೆಂದರೆ 'ಇಂಟಕ್ ಪದಾಧಿಕಾರಿಗಳು ಮೂಲಕ ಸಂಘದೊಂದಿಗೆ ಕೈಕೂಡಿಸಿ ಕಾಂಗ್ರೆಸ್ ಹಾಗೂ ಸ್ವತಃ ಇಂದಿರಾ ಗಾಂಧಿಯವರ ಹೆಸರು ಕೆಡಿಸುತ್ತಿದ್ದಾರೆ'. ದತ್ತಾಸಾಮಂತರ ಈ ಹೇಳಿಕೆಯನ್ನು ಮಹಾರಾಷ್ಟ್ರ ಸಿಐಟಿಯು ಕೂಡಲೆ ಖಡಾಖಂಡಿತವಾಗಿ ನಿಂದಿಸಿತು. ಹೀಗಿದ್ದರೂ ಕೂಡ ದತ್ತಾಸಾಮಂತರಂಥ ಪ್ರತಿಗಾಮಿ ಶಕ್ತಿಗಳು ಕಾರ್ಮಿಕವರ್ಗದ ಅಸಂತೋಷವನ್ನು ತಮ್ಮ ಸ್ವಾರ್ಥಕ್ಕಾಗಿ ಸಂಘಟಿಸುವುದನ್ನು ತಪ್ಪಿಸಬೇಕಾದರೆ ಎಡ ಶಕ್ತಿಗಳು ಸದಾಕಾಲವೂ ಎಚ್ಚರದಿಂದಿರಬೇಕೆಂಬುದನ್ನು, ಅರ್ಥವಾದ, ವ್ಯಕ್ತಿವಾದಗಳನ್ನು ವಿರೋಧಿಸುತ್ತ ಸದಾಕಾಲವೂ ಕಾರ್ಮಿಕರ ರಾಜಕೀಯ ಶಿಕ್ಷಣ, ಸಂಘಟನೆಗಾಗಿ ದುಡಿಯಬೇಕೆಂಬುದನ್ನು ದತ್ತಾಸಾಮಂತರ ಅಲೆಯು ಪುನರುಕ್ತಿಸುತ್ತದೆ.

ದತ್ತ ಸಾಮಂತರಂಥ ಪ್ರತಿಗಾಮಿ ಶಕ್ತಿಗಳು ಕಾರ್ಮಿಕ ವರ್ಗದ ಅಸಂತೋಷವನ್ನು ತಮ್ಮ ಸ್ವಾರ್ಥಕ್ಕಾಗಿ ಸಂಘಟಿಸುವುದನ್ನು ತಪ್ಪಿಸಬೇಕಾದರೆ ಎಡಶಕ್ತಿಗಳು ಸದಾಕಾಲವೂ ಎಚ್ಚರದಿಂದಿರಬೇಕೆಂಬುದನ್ನುಅರ್ಥವಾದ, ವ್ಯಕ್ತಿವಾದಗಳನ್ನು ವಿರೋಧಿಸುತ್ತ ಸದಾಕಾಲವೂ ಕಾರ್ಮಿಕರ ರಾಜಕೀಯ ಶಿಕ್ಷಣ, ಸಂಘಟನೆಗಾಗಿ ದುಡಿಯಬೇಕೆಂಬುದನ್ನು ದತ್ತಾ ಸಾಮಂತರ ಅಲೆಯು ಪುನರುಕ್ತಿಸುತ್ತದೆ.

ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಮುಂಬೈಯಲ್ಲಿ ಹಾಗೂ ಮಹಾರಾಷ್ಟ್ರದ ಇತರೆಡೆಗಳಲ್ಲಿ ಅಭೂತಪೂರ್ವ ಬೆಂಬಲ ದೊರೆಯುತ್ತಿದೆ. ಸಿಐಟಿಯು.ವನ್ನೊಳಗೊಂಡು ಇತರ ಸಂಘಟನೆಗಳು ಆಹಾರ ಧಾನ್ಯ ಸಹಾಯ ಇತ್ಯಾದಿ ತರತರದ ಬೆಂಬಲ ಕಾರ್ಯಕ್ರಮ ಕೈಕೊಳ್ಳುತ್ತಿವೆ. ಕೆಲವು ದಿನಗಳ ಹಿಂದೆ ಪರಿಸ್ಥಿತಿಯ ಒತ್ತಡದಿಂದಾಗಿ ದತ್ತಾಸಾಮಂತ ಕೂಡ ಕಾರ್ಮಿಕ ಸಂಘಟನೆಗಳ ಸಂಯುಕ್ತ ಕ್ರಿಯಾ ಸಮಿತಿಯಲ್ಲಿ ಸೇರಿದ್ದಾರೆ. ಮಾರ್ಚ್ 11ರಂದು ವಿಧಾನ ಸಭೆಗೆ ಸಾಗಿದ ಕಾರ್ಮಿಕರ ಲಾಂಗ ಮಾರ್ಚ್‌ನಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಕಾರ್ಮಿಕರಿದ್ದರು. ಏಪ್ರಿಲ್ ಮೊದಲ ವಾರದಲ್ಲಿ ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಬೆಂಬಲಾರ್ಥವಾಗಿ ಮಹಾರಾಷ್ಟ್ರ ಬಂದ್ ಆಯೋಜಿಸಬೇಕೆಂಬ ಸಿಐಟಿಯು.ವಿನ ಸೂಚನೆಯನ್ನು ಕ್ರಿಯಾ ಸಮಿತಿಯು ಅನುಮೋದಿಸುವ ಸಂಭವವಿದೆ. ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ಕೊಡುತ್ತ ಮುಂಬೈಯ, ಮಹಾರಾಷ್ಟ್ರದ, ದೇಶದ ಕಾರ್ಮಿಕ ವರ್ಗವು ಅದರತ್ತ ಗಮನ ಹರಿಸಿದೆ. ●

ಸಿ. ಪಿ. ಐ.ನ ಕರಡು ರಾಜಕೀಯ ನಿರ್ಣಯ

ಎಂ. ಬಸವಪುನ್ನಯ್ಯ

ಯುದ್ಧಾಪಾಯದ ವಿರುದ್ಧ ಹೋರಾಟ

(ಕಳೆದ ಸಂಚಿಕೆಯಿಂದ)

ಸಿ. ಪಿ. ಐ. ನ 12ನೇ ಅಧಿವೇಶನದ ಕರಡು ರಾಜಕೀಯ ನಿರ್ಣಯು ಬಿ ಜೆ. ಪಿ. ಬಗ್ಗೆ ಸರಿಯಾದ ಅಂಶಗಳನ್ನು ಹೇಳಿದೆ. "ದೇಶದ ವಿವಿಧ ಭಾಗಗಳಲ್ಲಿ ಬಿ. ಜೆ. ಪಿ. ಶಕ್ತಿಗೂಡಿಸಿಕೊಳ್ಳುತ್ತಿದೆ; ಅತೀ ಕೋಮುವಾದಿ, ಜಾತೀವಾದೀ ಹಾಗೂ ಮೂಢನಂಬಿಕೆಯ ಪ್ರಚೋದನೆಗಳೊಂದಿಗೆ ಇಂದಿರಾಗಾಂಧಿ ಸರಕಾರದ ಆರ್ಥಿಕ ಧೋರಣೆಗಳಿಂದ ಜನತೆಯಲ್ಲುಂಟಾಗಿರುವ ಅತೃಪ್ತಿಯನ್ನು ಅಗ್ಗದ ಜನಪ್ರಿಯತೆ ಗಳಿಸುವ ರೀತಿಯಲ್ಲಿ ದುರುಪಯೋಗ ಪಡಿಸಿಕೊಳ್ಳುವುದರ ಮೂಲಕ ಅದು ತನ್ನ ಪ್ರಭಾವ ಹಾಗೂ ಸಿದ್ಧಾಂತವನ್ನು ಪಸರಿಸುತ್ತಿದೆ" ಎಂದು ನಿರ್ಣಯದಲ್ಲಿ ಸರಿಯಾಗಿಯೇ ಗಮನಿಸಲಾಗಿದೆ. "ನಮ್ಮ ದೇಶದ ಬಲ-ಪ್ರತಿಕ್ರಿಯಾವಾದದ ಮುಂಚಲವನ್ನು ಬಿ. ಜೆ. ಪಿ. ಪ್ರತಿನಿಧಿಸುತ್ತಿದೆ. ಮತ್ತು ಅತಿರೇಕವೆನ್ನಿಸುವಷ್ಟು ಗುತ್ತೇದಾರಿಗಳ ಹಾಗೂ ಸಾಮ್ರಾಜ್ಯಶಾಹಿಗಳ ಪಕ್ಷಪಾತಿಯೂ, ಅಷ್ಟೇ ಅದು ಕಮ್ಯೂನಿಸ್ಟ್ ವಿರೋಧಿಯೂ ಆಗಿದೆ" ಎಂದು ನಿರ್ಣಯ ಹೇಳುತ್ತದೆ. ಅದು ಅತಿರೇಕ ವೆನಿಸುವಷ್ಟು ಭೂಮಾಲಕ ಪಕ್ಷಪಾತಿ ಕೂಡ ಎಂದು ನಾವಿಲ್ಲಿ ಸೇರಿಸಬಯಸುತ್ತೇವೆ.

ಸಿ. ಪಿ. ಐ. ಮೇಲಿನ ಹೇಳಿಕೆಯಿಂದ ಇನ್ನೂ ಒಂದು ಸರಿಯಾದ ಹಾಗೂ ಮಹತ್ವದ ತೀರ್ಮಾನವನ್ನು ಹೊಂದಲಾಗಿದೆ. ಅದೆಂದರೆ "ಆಡಳಿತ ಪಕ್ಷದ ಪ್ರಜಾಪ್ರಭುತ್ವ - ವಿರೋಧೀ ಹಾಗೂ, ಜನವಿರೋಧೀ ಧೋರಣೆಗಳ ವಿರುದ್ಧ ಹೋರಾಟದೊಂದಿಗೆ ನಮ್ಮ ಪಕ್ಷ ಬಿ.ಜೆ.ಪಿ. ಯು ವಿರುದ್ಧ ಎಡೆಬಿಡದ ಹೋರಾಟವನ್ನು, ಎಡ-ಪ್ರಜಾಪ್ರಭುತ್ವವಾದೀ ರಾಷ್ಟ್ರೀಯ ಪರ್ಯಾಯ ರಚಿಸುವ ಹೋರಾಟದ ಅನಿವಾರ್ಯ ಅಂಶವೆಂದೆಣಿಸಿ ನಡೆಸಬೇಕು.

ಕಾಂಗ್ರೆಸ್ (ಐ) ನಿಂದ ಅಪಾಯ

ನಮ್ಮ ಅಭಿಪ್ರಾಯದಲ್ಲಿ ಇವೆಲ್ಲ ಯಾರೂ ಅಲ್ಲಗಳೆಯಲಾರದ ಹೇಳಿಕೆಗಳು. ಇವು ಸಿ.ಪಿ.ಐ. (ಎಂ) ಈ ವಿಷಯಗಳ ಬಗ್ಗೆ ಹೊಂದಿರುವ ಅಭಿಪ್ರಾಯಗಳೊಂದಿಗೆ ತಾಳೆಯಾಗುತ್ತವೆ. ಆದರೆ ತೊಂದರೆಯೆನಿಸುವುದು, ಒಂದೆಡೆ ಬಿ. ಜೆ ಪಿ. ವಿರುದ್ಧ ಯಾವುದಕ್ಕೂ ಜಗ್ಗದ ಹೋರಾಟದಲ್ಲಿ ಸಹಕಾರ ನೀಡ ಬಯಸುವ ಎಲ್ಲಾ ಜಾತ್ಯಾತೀತ ಶಕ್ತಿಗಳ ಸಹಕಾರ ಪಡೆಯಬೇಕೆಂದು ಪ್ರತಿಪಾದಿಸುವ ಸಿ. ಪಿ. ಐ. ಇನ್ನೊಂದೆಡೆ ಬಿ.ಜೆ ಪಿ. ತನ್ನದೇ ಆದ ಕಾರಣಗಳಿಗಾಗಿ ಸರ್ವಾಧಿಕಾರ-ವಿರೋಧೀ ಹೋರಾಟದಲ್ಲಿ ಸಹಕಾರ ನೀಡಬಯಸುತ್ತಿದ್ದರೂ ಅವರೊಂದಿಗೆ ಸಹಕರಿಸಲು ಬದ್ಧ ವಿರೋಧ ವ್ಯಕ್ತಪಡಿಸುತ್ತದೆ.

ಸರ್ವಾಧಿಕಾರೀ ಕಾಂಗ್ರೆಸ್ (ಐ) ಹಾಗೂ ಬಲ-ಪ್ರತಿಕ್ರಿಯಾವಾದಿ ಬಿ.ಜೆ. ಪಿ. ಇವೆರಡರ ವಿರುದ್ಧ ಯಾವುದಕ್ಕೂ ಜಗ್ಗದ ಹೋರಾಟ ನಡೆಸದೆ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಮುನ್ನಡೆಯಲು ಸಾಧ್ಯವಿಲ್ಲ ಎಂಬುದು ಎಲ್ಲರೂ ಒಪ್ಪತಕ್ಕಂತಹುದು. ಎಡಪಂಥೀಯರ ಮಟ್ಟಿಗಂತೂ ಈ ಬಗ್ಗೆ ಭಿನ್ನಾಭಿಪ್ರಾಯವಿಲ್ಲ ಆದರೆ ಒಂದು ವಿಷಯವನ್ನು ಸಿ. ಪಿ. ಐ. ಕಡೆಗಣಿಸುವಂತೆ ಕಾಣಿಸುತ್ತಿದೆ ಸರ್ವಾಧಿಕಾರೀ ಕಾಂಗ್ರೆಸ್ (ಐ) ಅಧಿಕಾರದಲ್ಲಿದೆ. ಅದು ಈಗಾಗಲೇ ಸಂಸತ್ತನ್ನು ಅಪಮೌಲ್ಯಗೊಳಿಸಲು, ನ್ಯಾಯಾಂಗದ ಮೇಲೆ ದಾಳಿ ಮಾಡಲು ಹಾಗೂ ವಿರೋಧ ಪಕ್ಷಗಳು ಹಾಗೂ ಪತ್ರಿಕಾರಂಗವನ್ನು ದೂರಲಾರಂಭಿಸಿದೆ. ಆಳುವ ಪಕ್ಷದ ನಾಯಕಿ ತನ್ನ ಪಕ್ಷದೊಳಗಡೆಯೇ ಪ್ರಜಾಪ್ರಭುತ್ವವನ್ನು ಅಂತ್ಯಗೊಳಿಸಿ ಒಂದು ಸರ್ವಾಧಿಕಾರೀ ಆಡಳಿತದ ಮುನ್ಸೂಚಿಯಾಗಿ ವಂಶಪಾರಂಪರ್ಯದ ಆಳ್ವಿಕೆ ನಡೆಸಲು ತಯಾರಿ ನಡೆಸುತ್ತಿದ್ದಾರೆ.

1969-79ರ ನಡುವೆ ಎಡ ಪಂಥೀಯರ ಮೇಲೇರಿ ಅವರ ಒಗ್ಗಟ್ಟನ್ನು ಮುರಿದದ್ದು ಈ ಆಳುವ ಕಾಂಗ್ರೆಸ್ ಪಕ್ಷವೇ. 1971-77ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯಿಂದ ಎಡಪಂಥೀಯರನ್ನು ಸದೆ ಬಡಿಯಲು ಪ್ರಯತ್ನಿಸಿದ್ದು ಆಳುವ ಕಾಂಗ್ರೆಸ್. ಇದೇ ಆಳುವ ಪಕ್ಷವೇ ಕೇರಳದಲ್ಲಿ ಎಡಪಂಥೀಯ ಒಕ್ಕಟ್ಟನ್ನು ಮುರಿದು ಒಂದು ದಶಕ ಕಾಲ ಸಿ.ಪಿ.ಐ. (ಎಂ) ನ್ನು ಬಗ್ಗು ಬಡಿಯಲು ಪ್ರಯತ್ನಿಸಿದ್ದು, ಮತ್ತು 1975-77 ರಲ್ಲಿ ತುರ್ತು ಪರಿಸ್ಥಿತಿ ಹೇರಿದ್ದು ಹಾಗೂ ಈಗಲೂ ಸಾಧ್ಯವಾದರೆ ಅದನ್ನು ಮತ್ತೆ ಮಾಡುವ ಬೆದರಿಕೆ ಹಾಕುತ್ತಿರುವುದೂ ಅದೇ ಆಳುವ ಕಾಂಗ್ರೆಸ್.

ಬಿ.ಜೆ.ಪಿ. ಈಗ ಒಂದು ವಿರೋಧ ಪಕ್ಷ. ಅದು ತನ್ನ ಸ್ವಂತ ಹಿತರಕ್ಷಣೆಗಾಗಿಯೇ ಸಂಸಧೀಯ ಪ್ರಜಾಪ್ರಭುತ್ವದ ರಕ್ಷಣೆಯ, ಅಧ್ಯಕ್ಷೀಯ ವ್ಯವಸ್ಥೆಯ ವಿರುದ್ಧ, ನ್ಯಾಯಾಂಗದ ಮೇಲೆ ಸರ್ವಾಧಿಕಾರಿ ಶಕ್ತಿಗಳ ಹಲ್ಲೆಯ ವಿರುದ್ಧ ಮಾತನಾಡುತ್ತಿದೆ. ಎಡ ರಂಗ ಸರಕಾರವನ್ನು ಉರುಳಿಸಲು ಆಳುವ ಕಾಂಗ್ರೆಸ್ ಹೂಡಲು ಬಯಸುತ್ತಿರುವ ಸಂಚುಗಳನ್ನು ವಿರೋಧಿಸುತ್ತಿದೆ. ಸರ್ವಾಧಿಕಾರೀ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಆಳುವ ವರ್ಗಗಳ ಪಕ್ಷಗಳ ನಡುವಿನ ಕಲಹಗಳನ್ನು ನಿರ್ಲಕ್ಷಿಸುವುದು ಒಂದು ದೊಡ್ಡ ತಪ್ಪು ಎಂದು ಸಿ. ಪಿ. ಐ. (ಎಂ) ಅಭಿಪ್ರಾಯಪಡುತ್ತದೆ. ಸದ್ಯದ ಪರಿಸ್ಥಿತಿಯು ಈ ಸರಿಯಾದ ಅಂದಾಜು ಹಾಗೂ ತಿಳುವಳಿಕೆಯಿಂದಲೇ ಸಿ.ಪಿ.ಐ. (ಎಂ)ನ ವಿಶಾಲ ವೇದಿಕೆಯ ಘೋಷಣೆ ಮೂಡಿಬಂದಿದೆ.

ಕಾಂಗ್ರೆಸ್ (ಐ) ಹಾಗೂ ಅದರ ಸರಕಾರದ ನಿಜವಾದ ಹಾಗೂ ಯೋಜಿತ ಹಲ್ಲೆಗಳಿಂದ ಎಡಪಂಥೀಯರ ಅಸ್ತಿತ್ವವನ್ನೇ ರಕ್ಷಿಸುವುದು ಹೇಗೆ, ಎಡಪಂಥದ ಮುನ್ನಡೆಗೆ ಅದರ ಶಕ್ತಿ ಬೆಳೆಸುವುದು ಹಾಗೂ ಎಡ-ಪ್ರಜಾಪ್ರಭುತ್ವವಾದೀ ಪರ್ಯಾಯವನ್ನು ಕಟ್ಟುವುದು ಹೇಗೆ ಎಂಬ ಪ್ರಶ್ನೆಗಳು ಸರ್ವಾಧಿಕಾರೀ ಅಪಾಯದ ವಿರುದ್ಧ ಸಾಧ್ಯವಾದಷ್ಟು ವಿಶಾಲವಾದ ಪ್ರತಿರೋಧವನ್ನು ಒಟ್ಟುಗೂಡಿಸುವ ಪ್ರಶ್ನೆಯೊಂದಿಗೆ ತಕ್ಷಣದ ಸಂಬಂಧ ಹೊಂದಿವೆ ಈ ಮಹತ್ವದ ಪ್ರಶ್ನೆಯನ್ನು ಬದಿಗಿಟ್ಟು ಎಡ ಒಗ್ಗಟ್ಟು ಎಡ-ಪ್ರಜಾಪ್ರಭುತ್ವವಾದೀ ಒಗ್ಗಟ್ಟು ಎಡ-ಪ್ರಜಾಪ್ರಭುತ್ವವಾದೀ ಪರ್ಯಾಯ ರಚಿಸಿ ಬಿ. ಜೆ. ಪಿ. ತಾನೂ ಬೂರ್ಜ್ವಾ ಪರ್ಯಾಯವಾಗಬೇಕೆಂಬ ಯೋಜನೆಯನ್ನು ವಿಫಲಗೊಳಿಸುವುದು ಇತ್ಯಾದಿಗಳ ಬಗ್ಗೆ ಘೋಷಣೆ ಹಾಕುವುದು ತಿರುಳಿಲ್ಲದ ಮಾತಾಗುತ್ತದೆ ಮತ್ತು ಅವಾಸ್ತವವಾಗಿ ಕಾಣುತ್ತದೆ.

ಮಾತಿಗೆ ತಕ್ಕ ಕೆಲಸ ವಿರಬೇಕು

ಎಡ ಒಕ್ಕಟ್ಟು, ಅದೇ ರೀತಿ ಎಡ-ಪ್ರಜಾಪ್ರಭುತ್ವವಾದಿಗಳ ಒಕ್ಕಟ್ಟು ಈ ಘೋಷಣೆಗಳ ಹಿಂದಿನ ಕಳಕಳಿಯನ್ನು ಜನತೆ ತೀರ್ಮಾನಿಸುವುದು ಎಡ ಪಂಥೀಯರು ಸರ್ವಾಧಿಕಾರೀ ಕಾಂಗ್ರೆಸ್ (ಐ) ವಿರುದ್ಧ ಒಂದು ವಿಶಾಲ ವೇದಿಕೆ ರೂಪಿಸುವಲ್ಲಿ, ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ಹೇರುವ ಸರ್ವಾಧಿಕಾರೀ ಶಕ್ತಿಗಳ ಸಂಚುಗಳನ್ನು ನಿಷ್ಫಲಗೊಳಿಸುವಲ್ಲಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ರಕ್ಷಿಸಿ ವಿಸ್ತರಿಸುವಲ್ಲಿ ಎಷ್ಟು ಆಸಕ್ತಿ ವಹಿಸುತ್ತಾರೆ ಎಂಬುದರ ಮೇಲೆ.

ಆದರೆ ಸಿ.ಪಿ.ಐ ನ ನಿರ್ಣಯು ಸರ್ವಾಧಿಕಾರದ ವಿರುದ್ಧ ಹೋರಾಟ ಹಾಗೂ ಈ ಹೋರಾಟದಲ್ಲಿ ಒಟ್ಟುಗೂಡಿಸಬಹುದಾದ ಶಕ್ತಿಗಳ ಕುರಿತು ಯಾವುದೇ ವಿಶೇಷ ಗಮನ ನೀಡಿಲ್ಲ. ಅಲ್ಲದೆ ಎಡ ಒಕ್ಕಟ್ಟು ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ಒಕ್ಕಟ್ಟಿನ ಬಗ್ಗೆಯೂ ತೀವ್ರವಾಗಿ ಯೋಚಿಸಿಲ್ಲ. ಎಡ ಒಕ್ಕಟ್ಟನ್ನು ಬಲಪಡಿಸಲು ತನ್ನ ಯತ್ನಗಳನ್ನು ಸಿ.ಪಿ ಐ. ತೀವ್ರಗೊಳಿಸಬೇಕು, ವಿಶೇಷವಾಗಿ ಸಿ.ಪಿ.ಐ ಮತ್ತು ಸಿ.ಪಿ ಐ. (ಎಂ) ನಡುವೆ ಎಲ್ಲಾ ಹಂತಗಳಲ್ಲಿ ಮುಂಬರುವ ಅವಧಿಯಲ್ಲಿನ ಜಂಟೀ ಕಾರ್ಯಾಚರಣೆಯಲ್ಲಿ ಒಕ್ಕಟ್ಟನ್ನು ಬಲಪಡಿಸಿ ಒಂದು ಮೇಲ್ಮಟ್ಟದ "ರಾಜಕೀಯ, ಕಾರ್ಯಕ್ರಮಾತ್ಮಕ ಹಂತಕ್ಕೆ" ಒಯ್ಯಬೇಕೆಂದು ಆ ನಿರ್ಣಯು ಹೇಳುತ್ತದೆ. ಮುಂದುವರೆದು ಆ ನಿರ್ಣಯದಲ್ಲಿ "ಕಾರ್ಯದಲ್ಲಿ ಈ ರೀತಿಯ ಒತ್ತಡದಲ್ಲಿ ಅಂತಿಮವಾಗಿ ನಮ್ಮ ದೇಶದಲ್ಲ ಕಮ್ಯೂನಿಸ್ಟ್ ಪುನರೇಕೀಕರಣವನ್ನು ಒಂದು ಸಿದ್ಧಾಂತದ ಆಧಾರದ ಮೇಲೆ ನಡೆಸುವಂತಾಗಲು ಇದು ದಾರಿ ಮಾಡಿಕೊಡಬಹುದು. ಸಿ ಪಿ. ಐ ಇಂತಹ ಏಕೀಕರಣದ ಪರವಾಗಿದೆ"ಯೆಂದು ಹೇಳಲಾಗಿದೆ. ನಿಸ್ಸಂಶಯವಾಗಿ ಇವೆಲ್ಲಾ ಉತ್ತಮ ಭಾವನೆಗಳೇನೋ ಸರಿ ಆದರೆ ಭಾರತದ ಪ್ರಭುತ್ವದ ಹಾಗೂ ಸರಕಾರದ ವರ್ಗ ಸ್ವಭಾವದ ವಿಶ್ಲೇಷಣೆ ಬಗ್ಗೆ ಸಿ. ಪಿ. ಐ (ಎಂ.) ಹಾಗೂ ಸಿ ಪಿ ಐ. ನಡುವೆ ಎಂದಿನವರೆಗೆ ಮೂಲಭೂತ ಭಿನ್ನಾಭಿಪ್ರಾಯಗಳು ಮುಂದುವರಿಯುತ್ತದೆಯೋ ಅಲ್ಲಿಯವರೆಗೆ "ನಮ್ಮ ದೇಶದಲ್ಲಿ ಕಮ್ಯೂನಿಸ್ಟ್ ಚಳುವಳಿಯ ಪುನರೇಕೀಕರಣ"ದ ಬಗ್ಗೆ ಪ್ರಸ್ತಾಪಿಸುವುದು ಅಪಕ್ವ ಮಾತಾಗುತ್ತದೆ.

ಉನ್ನತ ಭಾವನೆಗಳು ಹಾಗೂ ಸದಭಿಪ್ರಾಯದ ಅಭಿಲಾಷೆಗಳಷ್ಟೇ ಈ ಎರಡು ಪಕ್ಷಗಳು ಜಂಟೀ ಕಾರ್ಯಾಚರಣೆಗಳನ್ನು ಮುಂದುವರಿಸಿಕೊಂಡು ಹೋಗಲು ಅಥವಾ ಎಡ ಐಕ್ಯತೆಯನ್ನು ಕಟ್ಟಲು ಸಹಾಯಕವಾಗಲಾರವು. ಈ ಮಾತುಗಳಿಗೆ ತಕ್ಕದಾದ ಕೃತಿಗಳೂ ಇರಬೇಕು.

ಯುದ್ಧದ ಅಪಾಯ

ಉದಾಹರಣೆಗಾಗಿ ಸಿ.ಪಿ.ಐ ನಿರ್ಣಯು "ಯುದ್ಧ ಅಥವಾ ಶಾಂತಿಯ ಕೇಂದ್ರ ಪ್ರಶ್ನೆ" ಎನ್ನುವುದರ ಬಗ್ಗೆ ಪರಿಶೀಲಿಸೋಣ. ಸಿ ಪಿ. ಐ. (ಎಂ) ಹಾಗೂ ಸಿ ಪಿ.ಐ. ಎರಡೂ ಒಂದು ತಾಪಾಣು ಯುದ್ಧದ ಅಪಾಯವನ್ನು ಗಂಭೀರವಾಗಿ ಪರಿಗಣಿಸಿ ಭಾರತದೊಳಗೆ ಅಮೇರಿಕದ ಸಾಮ್ರಾಜ್ಯಶಾಹಿಯ ಅಣುಯುದ್ಧದ ಬೆದರಿಕೆಯ ವಿರುದ್ಧ ವಿಶಾಲ ಆಂದೋಲನ ನಡೆಸುವುದು ಈಗಿನ ತುರ್ತಿನ ಹೊಣೆ ಎಂದು ಭಾವಿಸಿದೆಯೆಂಬುದು ನಿಜ. ಆದರೆ ಸಿ.ಪಿ.ಐ ನ ಈ ನಿರ್ಣಯು ಅಮೇರಿಕನ್ ಸಾಮ್ರಾಜ್ಯಶಾಹಿಯೊಡನೆ ಸಮಾಜವಾದೀ ಚೀನಾವನ್ನು ಸಮಾಸೀಕರಿಸಿ ಅದರ ವಿರುದ್ಧ ಪ್ರಚಾರ ನಡೆಸುವ ರೀತಿಯನ್ನು ನೋಡಿದರೆ ಈ ಪ್ರಶ್ನೆಯು ಮೇಲೆ ಸಿ. ಪಿ. ಐ (ಎಂ) ಮತ್ತು ಸಿ. ಪಿ ಐ. ನಡುವೆ ಮಾತ್ರವಲ್ಲ ಇತರ ಸಾಮ್ರಾಜ್ಯಶಾಹೀ ವಿರೋಧೀ ಶಾಂತಿಪ್ರಿಯ ಶಕ್ತಿಗಳೊಂದಿಗೂ ಜಂಟೀ ಕಾರ್ಯಾಚರಣೆಯ ಸಾಧ್ಯತೆಗೆ ಅವಕಾಶವಿಲ್ಲದಂತೆ ಕಾಣುತ್ತದೆ.

"ಕೈಗಾರಿಕಾ ಸ್ಥಗಿತತೆ, ಏರುತ್ತಿರುವ ಹಣದುಬ್ಬರ, ನಾಗಾಲೋಟ ಹೂಡುತ್ತಿರುವ ನಿರುದ್ಯೋಗ ಹಾಗೂ ಪಾವತಿ ಬಾಕಿ ಕೊರತೆಯ ಹೆಚ್ಚಳದಿಂದ ಅಮೇರಿಕಾದ ಹಾಗೂ ಅದರ ನಾಟೋ ಮಿತ್ರರ ಆರ್ಥಿಕತೆ ಅನುಭವಿಸುತ್ತಿರುವ ಸರ್ವತೋಮುಖವಾದ ಆಳವಾದ ಸಂಕಟದ ಪ್ರತಿಫಲನವೇ ಅಮೇರಿಕದ ಸಾಮ್ರಾಜ್ಯಶಾಹಿಯ ಈ ಯುದ್ಧೋನ್ಮಾದ" ಎಂದು ಸಿ.ಪಿ.ಐ.ನ ನಿರ್ಣಯ ಸರಿಯಾಗಿಯೇ ಪ್ರತಿಪಾದಿಸುತ್ತದೆ. ಮುಂದುವರೆದು "ಸದ್ಯದ ಈ ಬಿಕ್ಕಟ್ಟು ಜಾಗತಿಕ ಬಂಡವಾಳಶಾಹೀ ಆರ್ಥಿಕ ವ್ಯವಸ್ಥೆಗೆ ಅದರ ಇತಿಹಾಸದಲ್ಲೇ ಅತೀ ಆಳವಾದ ಹಾಗೂ ಗಂಭೀರವಾದ ಸಂಕಟ" ಎಂದು ನಿರ್ಣಯ ಹೇಳುತ್ತದೆ.

ಆದರೆ ಇದೇ ನಿರ್ಣಯದ ನಂತರದ ಪುಟದಲ್ಲಿ ಹೇಳುತ್ತದೆ—"ಅಮೇರಿಕನ್ ಸಾಮ್ರಾಜ್ಯಶಾಹೀ ಸದ್ಯದ ಈ ಎಚ್ಚರಗೇಡೀ ಕಲಹ ಕೋರ ಯುದ್ಧ ಧೋರಣೆ ವಹಿಸಲು ಒಂದು ಕಾರಣ ಬೈಜಿಂಗ್ ನಾಯಕರಿಂದ ಅದಕ್ಕೆ ಸಿಗುತ್ತಿರುವ ಬಹಿರಂಗ ಬೆಂಬಲ ಹಾಗೂ ನೆರವು" "ಆದ್ದರಿಂದ ಸದ್ಯದ ಸಂದರ್ಭದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಯಿಯ ವಿರುದ್ಧ ಹೋರಾಟ ನವಮಾವೋವಾದದ ವಿರುದ್ಧ ಹೋರಾಟಕ್ಕಿಂತ ಭಿನ್ನವಾಗಿಲ್ಲ." ಇದರಿಂದ ತಲಪುವ ತೀರ್ಮಾನವೆಂದರೆ "ಸದ್ಯದ ಬೈಜಿಂಗ್ ನಾಯಕರ ತಪ್ಪುಗಳನ್ನು ಹಾಗೂ ಅಪರಾಧಗಳನ್ನು ಸತತವಾಗಿ ವಿರೋಧಿಸಿ ಬಯಲುಗೆಳೆಯುವುದೊಂದೇ... ಸೋದರ ಪಕ್ಷಗಳು ಚೀನೀ ಜನತೆ ಸರಿಯಾದ ಸ್ಥಿತಿಯನ್ನು ಅರಿತುಕೊಳ್ಳುವಂತೆ ಮಾಡಲು, ಚೀನೀ ಕಮ್ಯೂನಿಸ್ಟ್ ಪಕ್ಷದ ಇಂತಹ ಶಕ್ತಿಗಳು ಬಲಗೊಳ್ಳಲು ಮಾಡಬಹುದಾದ ಏಕೈಕ ಕೆಲಸ."

(ಮುಂದುವರಿಯುವುದು)

ಸಾಮಾಜಿಕ ಆರ್ಥಿಕ ನ್ಯಾಯ !

ಮಾರ್ಚ್ 2 ರಂದು ಪಾಟ್ನಾ (ಬಿಹಾರ) ದ ಸಮೀಪ ಅತ್ಯಂತ ಉದ್ದವಾದ (ಮಹಾತ್ಮ ಗಾಂಧಿ ಸೇತುವೆ) ಸೇತುವೆಯನ್ನು ಉದ್ಘಾಟಿಸುತ್ತಾ ಶ್ರೀಮತಿ ಗಾಂಧಿ ನೆರೆದಿದ್ದ ಸಾವಿರಾರು ಜನರನ್ನುದ್ದೇಶಿಸಿ ಹೀಗೆಂದರು : "ನಮ್ಮ ಸರ್ಕಾರವು ಸಮಾಜದ ಎಲ್ಲಾ ವರ್ಗಗಳ ಜನರಿಗೂ ಸಾಮಾಜಿಕ, ಆರ್ಥಿಕ ನ್ಯಾಯವನ್ನು ದೊರಕಿಸಲು ಶ್ರಮಿಸುತ್ತದೆ."

ಈ ಉದ್ಘಾಟನಾ ಕಾರ್ಯಕ್ರಮ ಕ್ಕೋಸ್ಕರ ಶಾಮಿಯಾನ ನಿರ್ಮಿಸಲು ಸುಮಾರು 50 ಎಕರೆ ಸಮೃದ್ಧ ಗೋದಿ ಪೈರು ಬೆಳೆದು ನಿಂತಿದ್ದ ಜಮೀನನ್ನು ಉಪಯೋಗಿಸಿಕೊಳ್ಳಲಾಯಿತು.

ಗೋದಿ ಬೆಳೆದ ರೈತರಿಗೆ ಎಕರೆಗೆ ಕೇವಲ ರೂ. 640 ರಂತೆ ಪರಿಹಾರ ಹಣ ಕೊಡಲಾಯಿತು.

(ಮಾರ್ಚ್ 27 ರ 'ಸಂಡೇ' ವರದಿ)

ಆರ್ಥಿಕ ಸಮೀಕ್ಷೆ:

ಬಡವರ ಬೆನ್ನು ಮುರಿಯುವ ಕೇಂದ್ರ ಮುಂಗಡ ಪತ್ರ

(ನಾಲ್ಕನೇ ಪುಟದಿಂದ)

ತೆರಲು ಪ್ರಾರಂಭವಾಗುತ್ತದೆ. ಕೇಂದ್ರ ಸರ್ಕಾರದ ರಕ್ಷಣೆ, ಪೋಲೀಸ್, ಆಡಳಿತ, ಸಹಾಯ ಧನ, ಇತ್ಯಾದಿ ಅನುತ್ಪಾದಿತ ವೆಚ್ಚಗಳೇ ರೂ ಹದಿನೆಂಟು ಸಾವಿರ ಕೋಟಿಗೂ ಮೀರಿದೆ! ಅಂದರೆ ಶೇಕಡಾ ಅರವತ್ತರಷ್ಟು ಅನುತ್ಪಾದಿತ ವಿಷಯಗಳಿಗೆ ವೆಚ್ಚವಾಗುತ್ತಿದೆ. ತಿಂಗಳಿಗೆ ರೂ. 1500 ಕೋಟಿ, ದಿನಕ್ಕೆ ರೂ ಐವತ್ತು ಕೋಟಿ, ಪ್ರತಿ ಒಬ್ಬ ಪ್ರಜೆಗೆ ವರ್ಷಕ್ಕೆ ಸರಾಸರಿ ರೂ. ಆರುನೂರ ಏಳರಷ್ಟು ಅನುತ್ಪಾದಿತ ವಿಷಯಗಳಿಗೆ ವಿನಿಯೋಗವಾಗುತ್ತದೆ ಪರಿಣಾಮವಾಗಿ, ಆರ್ಥಿಕ ಅಭಿವೃದ್ಧಿ ಕುಂಠಿತವಾಗುತ್ತದೆ ಉತ್ಪಾದನೆ, ಉದ್ಯೋಗಾವಕಾಶ ಹೆಚ್ಚುತ್ತಿಲ್ಲ. ಬೆಲೆ ಏರಿಕೆ ಹಣದುಬ್ಬರ ಹೆಚ್ಚುತ್ತದೆ.

ಆರ್ಥಿಕ ಅಭಿವೃದ್ಧಿಗೆ ಮೀಗಿಲಾಗಿರುವ ರೂ. 11,000 ಕೋಟಿ (ಆರನೇ ಯೋಜನೆಯ ಮೂರನೆ ವರ್ಷದ ವೆಚ್ಚ) ಕೂಡಾ, ಬೃಹತ್ ಕೈಗಾರಿಕೆ, ಗಣಿಕೆಲಸ ಇಂಧನ ಉತ್ಪಾದನೆ, ವ್ಯವಸಾಯ, ನೀರಾವರಿ, ಸಾರಿಗೆ,ಸಂಪರ್ಕ, ವಿಜ್ಞಾನ, ತಂತ್ರಜ್ಞಾನ ಮುಂತಾದವುಗಳಿಗೆ ವಿನಿಯೋಗವಾಗಿ ಭೂಮಾಲಿಕರೂ-ಬಂಡವಾಳ ಶಾಹಿಗಳೂ ಹೆಚ್ಚು ಪ್ರಯೋಜನ ಪಡೆಯುವಂತಾಗಿದೆ. ಪೌಷ್ಟಿಕ ಆಹಾರ, ಕುಡಿಯುವ ನೀರು ಆರೋಗ್ಯ, ಶಿಕ್ಷಣ, ವಸತಿ, ಮುಂತಾದ ಸಾರ್ವಜನಿಕ ಕಲ್ಯಾಣ ಕಾರ್ಯಗಳಿಗೆ ಅಲ್ಪ ಮಾತ್ರ ಹಣ ಮೀಸಲಾಗಿಡಲಾಗಿದೆ. ಬೆಲೆಏರಿಕೆ ಮತ್ತು ಹಣದುಬ್ಬರದ ಕಾರಣಗಳಿಂದ ಆರ್ಥಿಕ ಅಭಿವೃದ್ಧಿಗೆ ಮೀಸಲಾಗಿಟ್ಟ ಹಣವು ನಿರ್ದಿಷ್ಟವಾದ ಗುರಿಯನ್ನು ಸಾಧಿಸಲು ಸಾಕಾಗಲಾರದು. 20 ಅಂಶಗಳ ಆರ್ಥಿಕ ಕಾರ್ಯಕ್ರಮ, ಬಡವರ ಉದ್ಧಾರ, ಪಂಚವಾರ್ಷಿಕ ಯೋಜನೆ, ಇತ್ಯಾದಿಗಳೆಲ್ಲಾ ಬರೆದ ಕಾಗದದಲ್ಲಿಯೇ ಉಳಿಯುವುವು. ಜನಸಂಖ್ಯೆಯ ಹೆಚ್ಚಳದ ವಾದ ಹುರುಳಿಲ್ಲದ್ದು. ಕಳೆದ 33 ವರ್ಷಗಳಲ್ಲಿ ಜನಸಂಖ್ಯೆ ಎರಡರಷ್ಟು ಹೆಚ್ಚಾಗಿದ್ದರೆ, ಸರಕಾರದ ಆಯವ್ಯಯ ಸಾರ್ವಜನಿಕ ಸಾಲ, ಇತ್ಯಾದಿ ಐದರಷ್ಟು ಹೆಚ್ಚಾಗಿದೆ. ಹಾಗಾದರೆ ಹಣ ಸಂಪತ್ತು ಎಲ್ಲಿಗೆ ಹೋಯಿತು. ಬಂಡವಾಳಶಾಹಿ ಆರ್ಥಿಕ ಧೋರಣೆಗನುಗುಣವಾಗಿ ಸಂಪತ್ತು ಆದಾಯ ವರ್ಷವರ್ಷವೂ ದುಡಿಯುವ ಬಡ ಜನರಿಂದ ಅಸ್ತಿವಂತ ಶ್ರೀಮಂತರ ಜೊಕ್ಕಸಕ್ಕೆ ಹರಿಯಿತು!

ಸಾರ್ವಜನಿಕ ಸಾಲದ ಮೊತ್ತ 1950-51 ರಲ್ಲಿ ರೂ. 25 5 ಕೋಟಿ ಇದ್ದುದು, 1982-83 ರಲ್ಲಿ 77978 ಕೋಟಿಗೇರಿದೆ ಪ್ರತಿಪ್ರಜೆಯ ತಲೆಯ ಮೇಲೆ ಸರಾಸರಿ ರೂ, 1146 ಸಾರ್ವಜನಿಕ ಸಾಲದ ಹೊರೆ ಇದೆ. ಅಂದರೆ ಸರಾಸರಿ ಆದಾಯದಷ್ಟೇ ಸಾಲದ ಹೊರೆ ಋಣ ಭಾರವು ಸ್ವಾತಂತ್ರ್ಯೋತರದಲ್ಲಿ ಮೂವತ್ತು ಪಾಲು ಹೆಚ್ಚಿದರೂ, ಜನರ ಜೀವನ ಮಟ್ಟವು ಸ್ಥಗಿತಗೊಂಡಿದೆ, ಅಥವಾ ಕುಸಿಯುತ್ತಿದೆ.

ರೂಪಾಯಿ ಮೌಲ್ಯ 17ಪೈಸೆ; 1950 ರಲ್ಲಿ ರೂಪಾಯಿ ಮೌಲ್ಯ 100 ಪೈಸೆ ಯಾಗಿದ್ದರೆ ಈಗ 17 ಪೈಸೆಗೆ ಇಳಿದಿದೆ. 19 0 ರಲ್ಲಿ ರೂಪಾಯಿ ಮೌಲ್ಯ 100 ಪೈಸೆಯಾಗಿದ್ದರೆ 1970 ರಲ್ಲಿ 53-76 ಪೈಸೆ, 1981 ರಲ್ಲಿ 21-74 ಪೈಸೆಗೆ ಇಳಿದಿದೆ. ಸರಕಾರ ಬೆಲೆ ಏರಿಕೆ, ಹಣದುಬ್ಬರ ತಡೆಯಲು ಸಂಪೂರ್ಣ ಸೋತಿದೆ. ನಿಜ ಹೇಳಬೇಕಾದರೆ, ತನ್ನ ಬಂಡವಾಳಶಾಹಿ ಆರ್ಥಿಕ ಧೋರಣೆಗನುಗುಣವಾಗಿ ಉದ್ದೇಶ ಪೂರ್ವಕವಾಗಿ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ ಹೆಚ್ಚಿಸಿ ಬಡವರಿಂದ - ಶ್ರೀಮಂತರಿಗೆ ಸಂಪತ್ತು ಆದಾಯ ಹರಿದು ಹೋಗುವಂತೆ ಮಾಡುತ್ತಿದೆ. ಸಗಟು ವ್ಯಾಪಾರದ ಬೆಲೆ ಮಾಡಿಯೂ ಹೆಚ್ಚುತ್ತಲೇ ಇದ್ದು, ಕಳೆದ ವರ್ಷದಲ್ಲಿ ಸ್ವಲ್ಪ ಸ್ಥಗಿತಗೊಂಡಿದೆ ಆದರೆ ಚಿಲ್ಲರೆ ವ್ಯಾಪಾರದ ಬೆಲೆ ಸೂಚಿ ಒಂದೇ ಸಮನೆ ಏರುತ್ತಿದೆ. ಕೂಲಿ ಸಂಬಳದಿಂದಲೇ ಬದುಕುವ ಕಾರ್ಮಿಕರೂ, ನೌಕರರೂ ಅಪಾರ ಕಷ್ಟನಷ್ಟಗಳಿಗೊಳಗಾಗಿದ್ದಾರೆ. ಬೋನಸ್, ತುಟ್ಟಿಭತ್ತೆ, ವೇತನ ಸ್ಥಗಿತ ಗೊಳಿಸುವ ಪ್ರಯತ್ನ ನಡೆಯುತ್ತಿದೆ. ಅವರ ಮುಷ್ಕರ ಹೋರಾಟಗಳನ್ನೂ ಹತ್ತಿಕ್ಕಲು ಆಡಳಿತ ಮತ್ತು ಶಾಸಕಾಂಗಗಳು ಹವಣಿಸುತ್ತಿವೆ.

ಖಾಸಗೀ ಮತ್ತು ಸಾರ್ವಜನಿಕ ರಂಗದಲ್ಲಿ ನಿರೀಕ್ಷಿಸಿ ದಷ್ಟು ಬಂಡವಾಳ ಹೂಡುವಿಕೆ ಆಗುತ್ತಿಲ್ಲ. ಬಂಡವಾಳ ಹೂಡುವಿಕೆಗನುಗುಣವಾಗಿ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆ ಆಗುತ್ತಿಲ್ಲ. ಉತ್ಪಾದನೆಯಾದರೂ ಜನ ಸಾಮಾನ್ಯರಿಗೆ ನ್ಯಾಯಯುತವಾಗಿ ವಿತರಣೆಯಾಗುತ್ತಿಲ್ಲ. ವಿತರಣೆಯಲ್ಲಿ ಆದಾಯ ಸಂಪತ್ತುಗಳಲ್ಲಿ ಅಸಮಾನತೆ ಇರುವುದರಿಂದ ನಿಜವಾದ ಉತ್ಪಾದಕರು, ಕಾರ್ಮಿಕರು, ರೈತರು ತಮ್ಮ ಸಂಪೂರ್ಣ ಉತ್ಪಾದಕ ಶಕ್ತಿಯನ್ನು ವಿನಿಯೋಗಿಸಲು ಅವಕಾಶ ಸಿಗುತ್ತಿಲ್ಲ. ಪರಿಣಾಮವಾಗಿ ಆರ್ಥಿಕ ಸ್ಥಗಿತ, ಬೆಲೆ ಏರಿಕೆ, ಹಣದುಬ್ಬರ, ಇನ್ನಷ್ಟು ತೆರಿಗೆ ಸಾಲ, ಮತ್ತಷ್ಟು ಬೆಲೆಏರಿಕೆ ಹಣದುಬ್ಬರ, ಬಡತನ, ನಿರುದ್ಯೋಗ, ಅಸಮಾನತೆಯ ವಿಷವರ್ತುಲದಲ್ಲಿ ಜನರು ಒದ್ದಾಡುವಂತಾಗಿದೆ. ಬಡವರ ಕುರಿತು ಕೇವಲ ಮೊಸಳೆ ಕಣ್ಣೀರು ಸುರಿಸಲಾಗುತ್ತಿದೆ.

●

ಕವಿ ಭಾರತಿ ನಿಮಗೆ ಗೊತ್ತೇ ?

ಪಂಡಿತರ ಮೆದುಳುಗಳಲ್ಲಿ
ಮುದುಡಿ ಸೊರಗಿದ್ದ
ನಿರ್ಜೀವ ಕಾವ್ಯಗಳ
ನಮ್ಮ ನಿಮ್ಮ ನಾಲಗೆಗಳ ಮೇಲೆ
ನವಿಲಂತೆ ನರ್ತಿಸುವುದ ಕಲಿಸಿದವ
ಯಾರು ಗೊತ್ತೇ ?

ಮಡಿವಂತರ ಮನೆಯ ಹಿಂದಿನ
ಕತ್ತಲೆಯ ಕೂಪಗಳಲ್ಲಿ
ಕೊಳೆಯುತ್ತಿದ್ದ ಕಾವ್ಯ ಮಧುವನ್ನು
ಹಾದಿ ಬೀದಿಗಳಲ್ಲಿ ಹಾಯಿಸಿದವ
ಯಾರು ಬಲ್ಲಿರಾ ?

ಭರತ ಭೂಮಿಯ
ಗತ ವೈಭವಗಳ ಜೋಗುಳದ ಹಾಡಲ್ಲಿ
ಮುಳಗಿ ನಿದ್ರಿಸದೆ
ಮಲಗಿದ್ದ ಭರತ ಖಂಡವನೇ
ಉದಯ ರಾಗವ ಹಾಡಿ
ಎಚ್ಚರಿಸಿದ ಈ ಕವಿಯ
ಬಲ್ಲಿರಾ ನೀವು ?

ಸಾಮ್ರಾಜ್ಯ ಶಾಹಿಗಳ
ಉಕ್ಕಿನ ಸರಪಳಿಗಳು
ಬಿಡುಗಡೆಯ ಬಿಸಿಯುಸಿರ ಗಾನಕ್ಕೆ
ಹುಡಿಯಾಗಿ ಬಿದ್ದ ಕಥೆ
ನಿಮಗೆ ಗೊತ್ತೇ ?

ಮೂಡಣದ ಬಾನಲ್ಲಿ
ಕೆಂಪು ಸೂರ್ಯನ ರಂಗು
ಕ್ರಾಂತಿ ಕಿರಣಗಳ ಚಲ್ಲುತ್ತ ಹೊರಟಾಗ
ಮುಂಗೋಳಿಯೊಂದು ಹೊಸರಾಗದಲ್ಲಿ
ಕೂಗಿ ಸ್ವಾಗತದ ಗೀತೆ ಹಾಡಿದ್ದ
ಕೇಳಿರುವಿರಾ ಸ್ವಾಮಿ ನೀವು ?

ಸಾಮಾನ್ಯರಲ್ಲಿ ಸಾಮಾನ್ಯನಾದರೂ
ಝಲಾರ್ ದೊರೆಯ ಸೋಲನ್ನು
ಆನಂದದಿಂದ ಹಾಡಿ ಕುಣಿದ ಕವಿ
ಇತಿಹಾಸದಲ್ಲೊಂದು ಮಿನುಗುವ ಚುಕ್ಕಿ
ತಮಿಳು ಕಾವ್ಯದ ಅಮರಕವಿ ಭಾರತಿ.

' ಉದಯ '

(ಶೇಖರನ್‌ರವರ ತಮಿಳು ಮೂಲವೊಂದರ ಭಾವಾನುವಾದ)

ಮಹಾಕವಿ

ಸುಬ್ರಮಣ್ಯ ಭಾರತಿಯವರ ಶತಮಾನೋತ್ಸವ



ದಿನಾಂಕ 21-3-82 ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಸಭಾಂಗಣದಲ್ಲಿ ಮಹಾಕವಿ ಸುಬ್ರಮಣ್ಯ ಭಾರತಿಯವರ ಶತಮಾನೋತ್ಸವವನ್ನು ಆಚರಿಸಲಾಯಿತು.

ಆಧುನಿಕ ತಮಿಳು ಸಾಹಿತ್ಯದ ಅಡಿಗಲ್ಲನ್ನು ನೆಟ್ಟವರು ಮಹಾಕವಿ ಸುಬ್ರಮಣ್ಯ ಭಾರತಿ (1882-1921). ಭಾರತಿ ಕೇವಲ ಸಾಹಿತಿಯಷ್ಟೇ ಅಲ್ಲ; ಕ್ರಾಂತಿಕಾರಿ, ಸಮಾಜ ಸುಧಾರಕ, ನಿಸ್ಸೀಮ ರಾಷ್ಟ್ರಪ್ರೇಮಿ, ಪತ್ರಿಕಾಕರ್ತ......ಹೀಗೆ ಹಲವಾರು ರಂಗಗಳಲ್ಲಿ ದುಡಿದ ಮಹಾವ್ಯಕ್ತಿ.

ಪ್ರಪಂಚದ ಯಾವುದೇ ಮೂಲೆಯಲ್ಲಿ ದಾಸ್ಯ, ಸುಲಿಗೆ, ಶೋಷಣೆಗಳ ವಿರುದ್ಧ ಹೋರಾಟ ನಡೆದರೆ ಅದನ್ನು ಸ್ವಾಗತಿಸಿ ಜನತಾ ಹೋರಾಟಕ್ಕೆ ಭಾರತಿ ಬೆಂಬಲ ನೀಡುತ್ತಿದ್ದರು. ತಮ್ಮ ಕವನಗಳ ಮೂಲಕ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ತೀವ್ರವಾಗಿ ವಿರೋಧಿಸಿದರು.

ನಮ್ಮ ಜನತೆಯ, ಮೌಢ್ಯ ಮತ್ತು ದಾಸ್ಯಕ್ಕೆ ಒಗ್ಗಿಹೋಗಿದ್ದ ಮನೋಭಾವಗಳನ್ನು ಖಂಡ ತುಂಡವಾಗಿ ಬಯಲಿಗೆಳೆದು ಜನಸಾಮಾನ್ಯರನ್ನು ಜಾತಿ-ಮತ್ತು ಭಾಷೆಗಳ ಗೊಂದಲದಿಂದ ಬಿಡಿಸಿ, ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಂದು ನಿಲ್ಲಿಸಲು ಭಾರತಿ ಪ್ರಯತ್ನಿಸಿದರು.

1982 ವರ್ಷಾದ್ಯಂತ ಈ ಸಾಹಿತ್ಯ ದಿಗ್ಗಜನ ಶತಮಾನೋತ್ಸವವನ್ನು ದೇಶಾದ್ಯಂತ ಆಚರಿಸಲಾಗುತ್ತಿದೆ. ಈ ಕುರಿತು ಬೆಂಗಳೂರಿನಲ್ಲಿ ರಚಿತವಾದ ಭಾರತಿ ಶತಮಾನೋತ್ಸವ ಸಮಿತಿಯವರು ಈ ಕಾರ್ಯಕ್ರಮ ವ್ಯವಸ್ಥೆ ಮಾಡಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಎಲ್. ಗುಂಡಪ್ಪನವರು ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಸಮಿತಿಯವರು ಪ್ರಕಟಿಸಿದ್ದ ಭಾರತೀಯವರ ಕವನಗಳ ಕನ್ನಡ ಅನುವಾದದ ಕಿರು ಸಂಕಲನ (ಅನುವಾದ-ಕೌಶಿಕ್) ವನ್ನು ವಿಧಾನಪರಿಷತ್ ಉಪಸಭಾಧಿಪತಿ ಶ್ರೀ ಕೃಷ್ಣಅಯ್ಯರ್ ಬಿಡುಗಡೆ ಮಾಡಿದರು.

ಸಮಾರಂಭವನ್ನುದ್ದೇಶಿಸಿ ಡಾ|| ಆರ್. ವೈದ್ಯನಾಥನ್ (ಐ. ಐ. ಎಂ.) ಶ್ರೀ ಕ. ವೆಂ ರಾಜಗೋಪಾಲ್, ಸಿ. ವೀರಣ್ಣ, ಪಿ ಕೆ. ಸುಬ್ರಮಣಿ ಮೊದಲಾದವರು ಮಾತನಾಡಿದರು.

ಭಾರತಿಯವರ ಕವನವನ್ನೊಳಗೊಂಡ ಕಾರ್ಡನ್ನು ಬಿಡುಗಡೆ ಮಾಡಿದ ಸಿ.ಐ.ಟಿ ಯು ರಾಜ್ಯ ಸಮಿತಿ ಅಧ್ಯಕ್ಷ ಕಾಂ/ ಸೂರ್ಯನಾರಾಣರಾವ್ ಅವರು ಜನತೆಯ ಕವಿ ಭಾರತಿಯವರ ಕುರಿತು ಮಾತನಾಡಿದರು.

ಮದ್ರಾಸಿನಲ್ಲಿ ಅದ್ದೂರಿಯಾಗಿ ನಡೆದ ಭಾರತೀ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾರತೀಯವರನ್ನು ಹೊಗಳಿ ಹಾಡಿದ ಗುಂಡೂರಾವ್ ಅವರು ಕರ್ನಾಟಕದಲ್ಲೇಕೆ ಈ ರೀತಿಯ ಕಾರ್ಯಕ್ರಮವನ್ನೇರ್ಪಡಿಸಲು ಮುಂದೆ ಬರಲಿಲ್ಲ? ಎಂದು ಪ್ರಶ್ನಿಸಿದ ಸೂರಿಯವರು ಅದಕ್ಕೆ ತಾವೇ ಉತ್ತರವನ್ನೂ ಕೊಡುತ್ತಾ ಹೀಗೆಂದರು: ಭಾರತೀಯವರ ಕವನಗಳ ಸಂದೇಶ ಜನತೆಗೆ ತಲುಪಿದರೆ ತನಗೆ ತೊಂದರೆ ಎಂಬುದ ಗುಂಡೂರಾಯರಿಗೆ ಗೊತ್ತಿದೆ. ಕಾರಣ ಈ ದಿಸೆಯಲ್ಲಿ ಯಾವ ಪ್ರಯತ್ನವನ್ನೂ ಮಾಡಿಲ್ಲ.

1917 ರಲ್ಲಿ ರಷ್ಯದಲ್ಲಿ ನಡೆದ ಮಹಾನ್ ಸಮಾಜವಾದಿ ಕ್ರಾಂತಿಯನ್ನು ಮನಃಪೂರ್ತಿ ಹಾಡಿ ಸ್ವಾಗತಿಸಿದ ಭಾರತೀಯರ ಕವಿತೆಗಳ ವಿಶೇಷತೆ ಏನೆಂದರೆ ಅವರ ಶೋಷಕ ವಿರೋಧಿ ಕಣ್ಣೋಟ ಎಂದ ಕಾಂ| ಸೂರಿಯವರು, ಭಾರತೀಯವರ ಕವನಗಳು ದೊಡ್ಡ ಸಂಖ್ಯೆಯಲ್ಲಿ ಕನ್ನಡದಲ್ಲಿ ಪ್ರಕಟವಾಗಬೇಕು' ಎಂಬ ಅಪೇಕ್ಷೆ ವ್ಯಕ್ತಪಡಿಸಿದರು.

ದುಡಿಮೆಗಾರರೇ ಬ್ರಹ್ಮ ಎಂದ ಭಾರತೀ, 1920ರ ಸಮಯದಲ್ಲೇ ಹೆಣ್ಣಿನ ದಾಸ್ಯ, ಜಾತಿ ಪದ್ಧತಿ ವಿರುದ್ಧ ಸ್ವರವನ್ನೆತ್ತಿದ್ದು ಗಮನಾರ್ಹ ಎಂದು ಸೂರಿಯವರು ತಿಳಿಸಿದರು.

ಭಾರತಿ ಅವರ ಕವನಗಳನ್ನು ಅನುವಾದಿಸಿರುವ ಶ್ರೀ ಕೌಶಿಕ್ ಅವರು, ಭಾರತಿಯವರ ಕೆಲವು ಹಾಡುಗಳನ್ನು ಹಾಡಿದರು.

ಈ ಶತಮಾನೋತ್ಸವ ಸಂದರ್ಭದಲ್ಲಿ ಭಾರತಿಯವರನ್ನು ಕನ್ನಡ ಜನತೆಗೆ ಪರಿಚಯಿಸಲು ಯತ್ನಿಸಿರುವ ಭಾರತಿ ಶತಮಾನೋತ್ಸವ ಸಮಿತಿಯವರೆಲ್ಲ ಸ್ತುತ್ಯಾರ್ಹರು.

—

ನಲಗೊಂಡಾದಲ್ಲಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಾಯಕನ ಕೊಲೆ

ಮಾರ್ಚ 2ರಂದು ಆಂಧ್ರದ ನಲಗೊಂಡಾದ ಬಸ್ ಸ್ಟ್ಯಾಂಡ್ ಸಮೀಪ ಹಾಡೇ ಹಗಲು (ಬೆಳಗಿನ 9-30) ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಾಯಕ, ರಾಜ್ಯ ಕೃಷಿ ಕಾರ್ಮಿಕ ಸಂಘಟನೆಯ ಕಾರ್ಯಕಾರೀ ಸಮಿತಿ ಸದಸ್ಯ ಕಾಂ। ಜಿ. ಶ್ರೀನಿವಾಸ ರೆಡ್ಡಿಯವರನ್ನು ಕಾಂಗ್ರೆ ಮತ್ತು ನಕ್ಸಲೀಯ ಗೂಂಡಾಗಳು ಕಗ್ಗೊಲೆ ಮಾಡಿದ್ದಾರೆ.

ಕಾಂ। ಶ್ರೀನಿವಾಸ ರೆಡ್ಡಿಯವರು ತಮ್ಮ ಊರಿಗೆ (ಮಿರಯಾಲಗುಡ) ವಾಪಸ್ ಹೊರಡುವ ಸನ್ನಾಹದಲ್ಲಿದ್ದಾಗ ಕಾಂಗ್ರೆ ಮತ್ತು ನಕ್ಸಲೀಯ ಗೂಂಡಾಗಳು ಅವರನ್ನು ಬಸ್‌ನಿಂದ ಹೊರಗೆಳೆದು ಕೊಲೆ ಮಾಡಿದ್ದಾರೆ. ಕಾಂ। ರೆಡ್ಡಿಯವರನ್ನು ತುಂಡು ತುಂಡಾಗಿ ಕತ್ತರಿಸಿ ಹಾಕಲಾಗಿದೆ. ಅವರೊಟ್ಟಿಗಿದ್ದ ಇನ್ನಿಬ್ಬ ಸಂಗಾತಿಗಳೂ ತೀವ್ರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮರುದಿನ (ಮಾ. 3) ಮಿರಯಾಲಗುಡದಲ್ಲಿ ಕಾಂ। ರೆಡ್ಡಿಯವರ ಅಂತ್ಯಸಂಸ್ಕಾರ ನಡೆಯಿತು. ಅಂತಿಮ ಸಂಸ್ಕಾರದಲ್ಲಿ ಜಿಲ್ಲೆಯಾದ್ಯಂತದಿಂದ ಸುಮಾರು 20 ಸಾವಿರ ಜನರು ಪಾಲ್ಗೊಂಡಿದ್ದರು.

ಪಕ್ಷದ ನಲಗೊಂಡಾ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಬಿ. ನರಸಿಂಹರೆಡ್ಡಿ, ಕಿಸಾನಸಭಾ ಪ್ರಧಾನ ಕಾರ್ಯದರ್ಶಿ ಕಾಂ। ಎಂ. ವಿ. ನರಸಿಂಹರೆಡ್ಡಿ, ಸಿ.ಪಿ.ಐ. (ಎಂ) ಶಾಸಕರು, ಸಿ.ಪಿ.ಐ. ಜಿಲ್ಲಾ ಕೌನ್ಸಿಲ್ ಕಾರ್ಯದರ್ಶಿ ಕಾಂ। ಡಿ. ನರಸಿಂಹ ಮೊದಲಾದವರು ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಕೆಲವೇ ದಿನಗಳ ಮೊದಲು ನಲಗೊಂಡಾ ಕೋರ್ಟ್ ಆವರಣದಲ್ಲೇ ಈ ಗುಂಡಾಗಳು ಸಿ. ಪಿ. ಐ (ಎಂ) ನಾಯಕರ ಮೇಲೆ ಹಲ್ಲೆ ಮಾಡಿದ್ದಾಗ ಸ್ಥಳದಲ್ಲೆ ಅವರನ್ನು ಹಿಡಿದು ಪೋಲೀಸರಿಗೆ ಕೊಟ್ಟಾಗಲೂ ಯಾವದೇ ಕ್ರಮ ಕೈಗೊಂಡಿಲ್ಲ.

ಪ್ರಭಾವೀ ಕಾಂಗ್ರೆ ನಾಯಕ ಜಿ. ಆರ್. ರೆಡ್ಡಿ [ಎಂ. ಪಿ.] ಮತ್ತು ಶಾಸಕ ಶ್ರೀನಿವಾಸರಾವ್ [ಕಾಂಗ್ರೆ] ಇವರುಗಳು ಈ ಗೂಂಡಾಗಳಿಗೆ ರಕ್ಷಣೆ ಕೊಡುತ್ತಿರುವುದಾಗಿ ವರದಿಯಾಗಿದೆ.

ಗುತ್ತಿಗಾರು

ಸರ್ಕಾರದ ಜನವಿರೋಧಿ ಕಾನುನುಗಳನ್ನು ಪ್ರತಿಭಟಿಸಿ ಬೃಹತ್ ಮೆರವಣಿಗೆ

ದ.ಕ. ಜಿಲ್ಲಾ ರೈತ ಸಂಘದ 7ನೇ ಸಮ್ಮೇಳನದ ನಿರ್ಣಯದ ಮೇರೆಗೆ ಸುಳ್ಯ ತಾಲ್ಲೂಕಿನ ಗುತ್ತಿಗಾರು ವಲಯ ರೈತಸಂಘದ ವಲಯ ಸಮಿತಿಯ ನೇತೃತ್ವದಲ್ಲಿ 10.3.82ರಂದು, ಸರಕಾರದ ಜನವಿರೋಧಿ ಕಾನೂನುಗಳನ್ನು ಪ್ರತಿಭಟಿಸಿ ರೈತ ಕೃಷಿ ಕಾರ್ಮಿಕರ ಮತ್ತು ಯುವಜನರ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು.

ಗುತ್ತಿಗಾರು ವಲಯದ ನಾಲ್ಕೂರು, ಗುತ್ತಿಗಾರು, ದೇವಚಳ್ಳ, ಮಡಪಾಡಿ, ಕೊಲ್ಲಮೊಗ್ರು, ಹರಿಹರ ಪಳ್ಳತಡ್ಕ, ಬಾಳುಗೋಡು ಮತ್ತು ಕಳ್ಮಕಾರು ಗ್ರಾಮಗಳಿಂದ ರೈತ-ಕಾರ್ಮಿಕ, ಯುವಜನರು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ರೈತರ-ಕೃಷಿ ಕಾರ್ಮಿಕರ ಹಾಗೂ ಜನಸಾಮಾನ್ಯರ ಬೇಡಿಕೆಗಳನ್ನು ಬರೆದಿದ್ದ ಘೋಷಣಾ ಫಲಕಗಳನ್ನು, ಬಾವುಟಗಳನ್ನು ಹಿಡಿದು ನಡೆದ ಮೆರವಣಿಗೆ ಆಕರ್ಷಕವಾಗಿತ್ತು.

ಮೆರವಣಿಗೆಯ ನಂತರ ಗುತ್ತಿಗಾರು ಪೇಟೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಯುವಕ ಮುಂದಾಳು ಕಾಂ। ಮೊಯ್ದು ಕುಂಞ ಎಲಿಮಲೆ ಇವರು ಸ್ವಾಗತಿಸುತ್ತಾ, ಜನಸಾಮನ್ಯರಿಗೆ ತಮ್ಮ ದೈನಂದಿನ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿ, ನ್ಯಾಯಕ್ಕಾಗಿ ಹೋರಾಟದ ಕಣಕ್ಕೆ ಇಳಿಯುವಂತೆ ಎಚ್ಚರಿಸಲು ಈ ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸಿರುವುದಾಗಿ ತಿಳಿಸಿದರು.

ಸುಳ್ಯ ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷ ಕಾಂ। ಬಾಲಕೃಷ್ಣ ಗೌಡರು ಮಾತನಾಡುತ್ತಾ, "ಓಟು ಗಿಟ್ಟಿಸಿಕೊಂಡು ಅಧಿಕಾರದಲ್ಲಿರುವ ಸರಕಾರವು ಜನವಿರೋಧಿ ಕಾನೂನು ಜಾರಿ ಮಾಡುವಾಗ, ಬಹುಸಂಖ್ಯೆಯಲ್ಲಿರುವ ಬಡ ಹಾಗೂ ಮಧ್ಯಮ ವರ್ಗದ ರೈತರು, ಕೃಷಿ ಕಾರ್ಮಿಕರು ಜಾಗೃತರಾಗಿ, ಪೇಟೆ ಪಟ್ಟಣಗಳಲ್ಲಿರುವ ಕಾರ್ಮಿಕ ಸಮೂಹದೊಂದಿಗೆ ಜೊತೆಗೂಡಿ ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ಸಿದ್ಧರಾಗಬೇಕು" ಎಂದರು.

ನಂತರ, ದ.ಕ. ಜಿಲ್ಲಾ 7ನೇ ಸಮ್ಮೇಳನದ ತೀರ್ಮಾನದಂತೆ ಸುಳ್ಯ ತಾಲ್ಲೂಕು ಗುತ್ತಿಗಾರು ವಲಯ ಸಮಿತಿಯು ರೈತ ಕೃಷಿ ಕೂಲಿ ಕಾರ್ಮಿಕರ ಪ್ರಾದೇಶಿಕ ಸಮಸ್ಯೆಗಳ ಈಡೇರಿಕೆಗಾಗಿ ನಡೆಸಲಿರುವ ಹೋರಾಟದ ಮೊದಲ ಹೆಜ್ಜೆಯಾಗಿ, ದ.ಕ. ಜಿಲ್ಲಾಧಿಕಾರಿಗೆ ಕಳಿಸಲಿರುವ ಮನವಿ ಪತ್ರವನ್ನು ಸಾರ್ವಜನಿಕರಿಗೆ ಓದಿ ಹೇಳಲಾಯಿತು.

ಮನವಿ ಪತ್ರದಲ್ಲಿರುವ ಮುಖ್ಯ ಬೇಡಿಕೆಗಳು

1) ಪಂಪು ಸೆಟ್ಟುಗಳಿಗಾಗಿ ನೀಡಲಾಗಿರುವ ಸೀಮೆಎಣ್ಣೆ ಪರ್ಮಿಟ್‌ನ್ನು ಪ್ರತಿ ತಿಂಗಳೂ ನವೀಕರಿಸಬೇಕು ಹಾಗೂ ನವೀಕರಿಸಿ ಪರ್ಮಿಟ್‌ಗೆ ಪ್ರತಿ ತಿಂಗಳೂ ಸೀಮೆ ಎಣ್ಣೆ ಒದಗಿಸಬೇಕು.

2) ದಿನಬಳಕೆ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲೂ ಪ್ರತಿ ಸಹಕಾರಿ ಸಂಘಕ್ಕೂ ಸಕಾಲದಲ್ಲಿ ಸರಬರಾಜು ಮಾಡಲೇ ಬೇಕು.

3) ಈ ವರ್ಷ ಹೊಸತಾಗಿ ಮನೆ ತೆರಿಗೆಯನ್ನು ಹೆಚ್ಚಿಸಿ ನೀಡಲಾಗಿರುವ ತಿಳುವಳಿಕೆ ಪತ್ರವನ್ನು ರದ್ದುಗೊಳಿಸಿ ತೆರಿಗೆ ವಸೂಲಾತಿಯನ್ನು ಕೈಬಿಡಬೇಕು.

4) ಸರಕಾರಿ ಸ್ಥಳದಲ್ಲಿ ಕೃಷಿ ಮಾಡಿದ ಎಲ್ಲಾ ಕೃಷಿಕರಿಗೆ ದರಖಾಸ್ತು ಕಾಯಂಗೊಳಿಸಲೇಬೇಕು. ಇತ್ಯಾದಿ...

ಈ ಬೇಡಿಕೆಗಳನ್ನೊಳಗೊಂಡ ಸಾಮೂಹಿಕ ಮನವಿಗೆ ಸಾರ್ವಜನಿಕರ ಸಲಹೆ-ಸೂಚನೆಗಳನ್ನು ಕೇಳುವುದರೊಂದಿಗೆ, ಗುತ್ತಿಗಾರು ವಲಯದ ಎಲ್ಲಾ ಗ್ರಾಮಗಳ ಗ್ರಾಮಸ್ಥರ ಸಹಿ ಸಂಗ್ರಹಿಸಿ ದ.ಕ. ಜಿಲ್ಲಾಧಿಕಾರಿಯವರಿಗೆ ಕಳಿಸಲು ತೀರ್ಮಾನಿಸಲಾಯಿತು.

ಕೊನೆಯಲ್ಲಿ ಸುಳ್ಯ ತಾಲೂಕು ಡಿ.ವೈ.ಎಫ್.ಐ. ಅಧ್ಯಕ್ಷ ಎಂ.ಎಲ್. ಚಂದ್ರಶೇಖರ ವಂದಿಸಿದರು.

ಜನರ ಮೇಲೆ ಹೊರಲಾರದ ಹೊರೆ

(ಒಂದನೇ ಪುಟದಿಂದ)

ಗಳೂ, ಜನತೆಯೂ ಹೆಚ್ಚಿನ ಈ ಕರಭಾರವನ್ನು ತಡೆಯಬೇಕೆಂದೂ ಸರಕಾರ ಅದನ್ನು ವಾಪಸ್ ಪಡೆಯುವಂತೆ ಮಾಡಬೇಕೆಂದೂ ವಿನಂತಿ ಮಾಡಿಕೊಳ್ಳುತ್ತದೆ.

ತೀವ್ರ ತರದ ದಬ್ಬಾಳಿಕೆ

ಜನರ ಮೇಲೆ ಹೆಚ್ಚು ಕರಭಾರವನ್ನು ಹೇರುತ್ತಿದ್ದಂತೆಯೇ, ಅಸಾಮಾನ್ಯ ಜೀವನ ಪರಿಸ್ಥಿತಿಯ ವಿರುದ್ಧ ಕಾರ್ಮಿಕ ವರ್ಗ ಮತ್ತು ಜನತೆ ಪ್ರತಿಭಟನೆ ತೀವ್ರಗೊಳಿಸುತ್ತಿರುವಾಗ, ಅದನ್ನು ಹತ್ತಿಕ್ಕುವ ಸಲುವಾಗಿ ಹದಿನಾರು ಕೈಗಾರಿಕೆಗಳನ್ನು ರಾಷ್ಟ್ರೀಯ ಭದ್ರತಾ ಕಾನೂನಿಗೆ ಅಳವಡಿಸಿಕೊಳ್ಳಲಾಗಿದೆ. ಜನವರಿ 19 ರ ಮಹಾ ಮುಷ್ಕರವನ್ನು ಹತ್ತಿಕ್ಕುವ ಸಲುವಾಗಿ ಈ ಕಾನೂನನ್ನು ಉದಾರವಾಗಿ ಉಪಯೋಗಿಸಿದ್ದಲ್ಲದೆ, ಆ ದಿವಸ ಕೆಲಸದಿಂದ ತೆಗೆಯಲ್ಪಟ್ಟ ಸಾವಿರಾರು ಕೆಲಸಗಾರರಿಗೆ ಇನ್ನು ನ್ಯಾಯ ಸಿಕ್ಕಿಲ್ಲ. ಉತ್ಪಾದನೆ ಹೆಚ್ಚಾದರೆ ಮಾತ್ರ ಸಂಬಳ ಹೆಚ್ಚಿಸಲಾಗುವುದೆಂಬ ಸುತ್ತೋಲೆಯೊಂದನ್ನು ಆರ್ಥಿಕ ಮಂತ್ರಿಗಳು ಕೇಂದ್ರ ಕೈಗಾರಿಕೆಗಳಲ್ಲಿಯ ಅಧಿಕಾರಿಗಳಿಗೆ ಕಳುಹಿಸಿದ್ದಾರೆ. ಈ ರೀತಿಯ ಸರ್ವವಿಧದ ದಬ್ಬಾಳಿಕೆಗಳ ಮೂಲಕ ಇಂದಿರಾಗಾಂಧಿಯವರು ತಾವು ಜಾಹೀರಪಡಿಸಿರುವ "ಉತ್ಪಾದನೆಯ ವರ್ಷ"ವನ್ನು ಪ್ರಾರಂಭಿಸಿದ್ದಾರೆ.

ತುಮಕೂರು

ಶಿಕ್ಷಕರ ಮೇಲೆ ನಡೆದ ಹಲ್ಲೆಯ ಖಂಡನೆ : ಕಾನೂನು ಕ್ರಮಕ್ಕೆ ಒತ್ತಾಯ

10-3-82ರಂದು (ಹೋಳಿ ಹಬ್ಬದ ದಿನ) ತುಮಕೂರಿನ ಸಿದ್ಧಗಂಗಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ನಿರಂಜನ ಆರಾಧ್ಯ ಎಂಬುವರ ಮೇಲೆ ಪುಂಡ ವಿದ್ಯಾರ್ಥಿಗಳ ಗುಂಪೊಂದು ಹಲ್ಲೆ ಮಾಡಿದ ಹೇಯ ಘಟನೆಯ ವರದಿಯಾಗಿದೆ.

ಈ ಹಲ್ಲೆಯನ್ನು ಖಂಡಿಸಿ, ಹಲ್ಲೆ ಮಾಡಿದವರ ಮೇಲೆ ತಕ್ಷಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ತುಮಕೂರಿನ ಶಿಕ್ಷಕ ವೃಂದ ಒತ್ತಾಯಿಸಿದೆ.

ಕೂಡಲೆ ಅಪಾದಿತರ ಮೇಲೆ ಕ್ರಮ ಕೈಗೊಳ್ಳದಿದ್ದರೆ ನೇರ ಕ್ರಮಕೈಗೊಳ್ಳಬೇಕಾಗುವುದೆಂದು ಎಚ್ಚರಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ। ಕೆ. ಆರ್. ನಾಯಕ್ ಅವರು ಹೇಳಿಕೆಯೊಂದು ಹೊರಡಿಸಿ ಈ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಕಾನೂನು ರಕ್ಷಕರಾದ ಪೋಲೀಸ್ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಹಲ್ಲೆ ನಡೆಸಿದವರನ್ನು ಪತ್ತೆಹಚ್ಚಬೇಕೆಂದು ಒತ್ತಾಯಿಸಿದ್ದಾರೆ.

ಜನವಿರೋಧಿ ಮುಂಗಡಪತ್ರ

ಪ್ರಸಕ್ತ ಸಾಲಿನ ಮುಂಗಡ ಪತ್ರವು ಜನವಿರೋಧಿಯಾದದ್ದು ಎಂದು ಕಾಂ। ಎನ್. ಎಲ್. ತಿಳಿಸಿದ್ದಾರೆ. ಅವರು ಈ ಕುರಿತು ಹೊರಡಿಸಿದ ಪತ್ರಿಕಾ ಹೇಳಿಕೆಯ ಸಾರಾಂಶ ಇಂತಿದೆ :

"ಮಾ. 17ರಂದು ರಾಜ್ಯ ವಿಧಾನ ಸಭೆಯಲ್ಲಿ ಹಣಕಾಸು ಮಂತ್ರಿ ಮೊಯಿಲಿ ಮಂಡಿಸಿರುವ ಪ್ರಸಕ್ತ ಸಾಲಿನ ಮುಂಗಡ ಪತ್ರ ಜನತಾ ಸಾಮಾನ್ಯರಿಗೆ ಯಾವ ಭರವಸೆಯನ್ನೂ ನೀಡಿಲ್ಲ. ಜನಸಾಮಾನ್ಯರ ದಿನಬಳಕೆಯ ಪ್ರತಿಯೊಂದು ವಸ್ತುವಿನ ಮೇಲೂ ಕರಭಾರ ಹೆಚ್ಚಲಿದೆ. ಇದೇ ಸಮಯದಲ್ಲಿ ಸುಮಾರು 64.77 ಕೋಟಿ ರೂ.ಗಳ ಕೊರತೆ ಹಾಗೆಯೇ ಇದೆ. ಇದರಿಂದ ಕರಭಾರ ಕ್ರಮೇಣ ಮತ್ತಷ್ಟು ಹೆಚ್ಚಲಿದೆ."

"ಕೈಗಾರಿಕೆ, ಕೃಷಿ, ನೀರಾವರಿ ಮೊದಲಾದ ಕ್ಷೇತ್ರಗಳಿಗೆ ಸಾಕಷ್ಟು ಆದ್ಯತೆ ಕೊಡದೇ ಕಡೆಗಣಿಸಲಾಗಿದೆ. ನಿರುದ್ಯೋಗಿಗಳಿಗೆ ಪರಿಹಾರ ದೊರಕಿಸುವಲ್ಲಿ ಸರ್ಕಾರ ಯಾವದೇ ಕ್ರಮ ಕೈಗೊಂಡಿಲ್ಲ. ಅದೇ ರೀತಿ ಕೃಷಿ ಕೂಲಿಕಾರರು ಮತ್ತಿತರ ಕುರಿತೂ ಸಹ."

"ರಾಜ್ಯೋತ್ಸವದ ಬೆಳ್ಳಿ ಹಬ್ಬದ ಈ ವರ್ಷ, ರಾಜ್ಯ ಸರ್ಕಾರ ಮೊದಲೆ ಬಳಲುತ್ತಿರುವ ಜನಸಾಮಾನ್ಯರನ್ನು ಮತ್ತಷ್ಟು ನಿರಾಶೆಗೊಳಿಸಿದೆ. ಕೇಂದ್ರ ಮುಂಗಡ ಪತ್ರದಿಂದ ಹೆಚ್ಚಾಗಿರುವ ಕರಭಾರಕ್ಕೆ ಇದೂ ಜೊತೆಗೂಡಿ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಲಿವೆ."

ಬೆಂಗಳೂರಿನತ್ತ

ಡಿ ವೈ ಎಫ್ ಐ ಸೈಕಲ್ ಜಾಥಾ ಬೀದರ್ ನಿಂದ ಪ್ರಾರಂಭ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೇಡರೇಷನ್ (ಡಿ.ವೈ.ಎಫ್.ಐ.) ನಿರುದ್ಯೋಗ ಸಮಸ್ಯೆಯ ವಿರುದ್ಧ ಪ್ರಜಾಸತ್ತಾತ್ಮಕ ಐಕ್ಯ ಹೋರಾಟವನ್ನು ಸಂಘಟಿಸುವಲ್ಲಿ ಶ್ರಮಿಸುತ್ತಿದೆ.

ನಿರುದ್ಯೋಗ ಸಮಸ್ಯೆಯ ಬಗ್ಗೆ ಯುವಜನ ಸಮುದಾಯದಲ್ಲಿ ಸರಿಯಾದ ಪ್ರಜ್ಞೆ ಮೂಡಿಸುವ ಪ್ರಯತ್ನವಾಗಿ ಮಾರ್ಚ 28ರಂದು ಪ್ರತಿವರ್ಷ ರಾಷ್ಟ್ರಾದ್ಯಂತ ನಿರುದ್ಯೋಗ ವಿರೋಧಿ ದಿನಾಚರಣೆಯನ್ನು ಆಚರಿಸುತ್ತಿದೆ.

ಈ ಕಾರ್ಯಕ್ರಮದ ಅಂಗವಾಗಿ ಡಿ. ವೈ. ಎಫ್.ಐ. ರಾಜ್ಯ ಘಟಕವು ಸೈಕಲ್ ಜಾಥಾ (ಬೆಂಗಳೂರಿಗೆ) ಏರ್ಪಡಿಸಿದೆ.

ಬೀದರ್, ಹುಬ್ಬಳ್ಳಿ-ಧಾರವಾಡ, ಮೈಸೂರು, ಮಂಗಳೂರು, ಕೊಡಗು, ಕೋಲಾರ ಮುಂತಾದ ಸ್ಥಳಗಳಿಂದ ಸೈಕಲ್ ಜಾಥಾ ಪ್ರಾರಂಭವಾಗಿವೆ.

ಬೀದರನಲ್ಲಿ ಸೈಕಲ್ ಜಾಥಾ ಕಾರ್ಯಕರ್ತರಿಗೆ ವರ್ಣರಂಜಿತ ಬೀಳ್ಕೊಡುಗೆ ಕೊಡಲಾಯಿತು. ಜಾಥಾದ ಉದ್ಘಾಟನೆಯನ್ನು ಸ್ಥಳೀಯ 'ದಮನ' ಪತ್ರಿಕೆಯ ವಿಶ್ವನಾಥ ಪಾಟೀಲ ಮಾಡಿದರು. ಕಾರ್ಯಕರ್ತರಿಗೆ ಶ್ರೀ ಪಾಟೀಲ ಶುಭ ಕೋರಿದರು.

ನಾವು ಇಂದು ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯ ಕಳೆದುಕೊಂಡಿದ್ದೇವೆ. ಸರಕಾರಕ್ಕೆ ಜಾಗೃತ ಮಾಡಲು ಹೊರಟ ಯುವಕರಿಗೆ ನಾನು ಶುಭ ಕೋರುತ್ತೇನೆ ಎಂದು ಕಾಂಗ್ರೆಸ್ (ಎಸ್)ನ ಬಾಬುರಾವ್ ಪಾಟೀಲ್, ಚಿಂಚೋಳಿಕರ ಅವರು ಡಿ. ವೈ. ಎಫ್. ಐ ತರುಣರನ್ನು ಬೀಳ್ಕೊಟ್ಟರು.

ದಿವಾಳಿಖೋರ ಸರಕಾರದ ನೀತಿಯನ್ನು ಬದಲಿಸಬೇಕಾದರೆ ಎಚ್ಚೆತ್ತುಕೊಳ್ಳಬೇಕೆಂದು ಸಿ.ಪಿ.ಐ. (ಎಂ) ನ ಕಾಂ। ಸಂಗ್ರಾಮಪ್ಪ ಯುವಕರನ್ನು ಬೀಳ್ಕೊಡುತ್ತ ನುಡಿದರು.

ಜಾಥಾಕ್ಕೆ ಶುಭಾಶಯ

ಡಿ. ವೈ. ಎಫ್. ಐ. ರಾಜ್ಯಘಟಕವು ಏರ್ಪಡಿಸಿದ ಸೈಕಲ್ ಜಾಥಾಕ್ಕೆ ಎಸ್. ಎಫ್. ಐ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ। ಆರಾಧ್ಯ ಶುಭಕೋರಿದ್ದಾರೆ.

Printed & Published by P. Ramachandra Rao by him on behalf of the Communist Party of India Marxist) Karnataka State Committee. L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M Lane, Balepet Cross, Bangalore-560 053. EDITOR ; M K. BHAT.